ವಿಜಯಪುರ | ಸಂಪುಟ 04 | ಸಂಚಿಕೆ 184 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ರವಿವಾರ, ಸೆಪ್ಟೆಂಬರ್, 13, 2026

"ಜಾಗತಿಕ ಭವಿಷ್ಯವನ್ನು ನಾವೆಲ್ಲರೂ ಹಂಚಿಕೊಳ್ಳುವುದಾದರೆ, ಅದನ್ನು ವಿನ್ಯಾಸಗೊಳಿಸುವ ಮತ್ತು ರೂಪಿಸುವ ಹಕ್ಕು ಕೂಡ ಎಲ್ಲ ದೇಶಗಳಿಗೂ ಸಮಾನವಾಗಿ ಸಿಗಬೇಕು. ಭಾರತವು ಈ ಪರಿವರ್ತನೆಯ ನಾಯಕತ್ವ ವಹಿಸಲು ಸಂಪೂರ್ಣ ಸಿದ್ಧವಾಗಿದೆ."



■ ನರೇಂದ್ರ ಮೋದಿ
ಪ್ರಧಾನ ಮಂತ್ರಿ



## ಜನರೇ ಮಾಲೀಕರು, ಅಧಿಕಾರಿಗಳು ಅವರ ಸೇವಕರು

### ಅಥಣಿಯಲ್ಲಿ ನಡೆದ ಪ್ರಜಾ ಸೇವಾ ಆಂದೋಲನ ಸಭೆಯಲ್ಲಿ ಸಚಿವ ಲಕ್ಷ್ಮಣ ಸವದಿ ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ

ಅಥಣಿ: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೆ ಮಾಲೀಕರು ಜನರ ತೆರಿಗೆ ಹಣದಿಂದ ವೇತನ ಪಡೆಯುವ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಜನರ ಸೇವಕರಾಗಿದ್ದು, ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಸಹಕಾರ ಸಚಿವ ಹಾಗೂ ಅಥಣಿ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ಪಟ್ಟಣದ ಖೋತ ಸಭಾ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿ, ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿದರು.

ಕಾನೂನುಬದ್ಧವಾಗಿ ಸಾಧ್ಯವಿರುವ ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಯಾವ ಅಧಿಕಾರಿಯ ಕಚೇರಿ ಎಲ್ಲಿದೆಯೊ ಆ ಕೇಂದ್ರ ಸ್ಥಾನದಲ್ಲೇ ಅವರು ಕಡ್ಡಾಯವಾಗಿ ವಾಸ್ತವ್ಯ ಮಾಡಬೇಕು ವಾಸ್ತವ್ಯಕ್ಕೆ ಸಂಬಂಧಿಸಿದಂತೆ ಮನೆ ಬಾಡಿಗೆ ಸೇರಿದಂತೆ ಅಗತ್ಯ ದಾಖಲೆಗಳನ್ನು ಮೇಲಾಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಿದರು.

ಪ್ರತಿ ಶನಿವಾರ ಹೋಬಳಿ ಮಟ್ಟದಲ್ಲಿ ಪ್ರಜಾ ಸೇವಾ ಆಂದೋಲನ ನಡೆಸಬೇಕು. ಸಾರ್ವಜನಿಕರಿಂದ ಸ್ವೀಕರಿಸುವ ಪ್ರತಿಯೊಂದು ಅರ್ಜಿಗೂ ಸ್ವೀಕೃತಿ ನೀಡಬೇಕು. ಅರ್ಜಿಯಲ್ಲಿರುವ ಸಮಸ್ಯೆಯನ್ನು ಸಾಧ್ಯವಾದಷ್ಟು ತಕ್ಷಣವೇ ಪರಿಹರಿಸಬೇಕು. ಕಾನೂನಿನ ವ್ಯಾಪ್ತಿಗೆ ಬಾರದ ಅರ್ಜಿಗಳಿಗೆ ಕಾರಣವನ್ನು ಲಿಖಿತವಾಗಿ ತಿಳಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಾರ್ಯಾಂಗ ಮತ್ತು ಶಾಸಕಾಂಗ ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಆಡಳಿತ ಪರಿಣಾಮಕಾರಿಯಾಗಲು ಸಾಧ್ಯ ಬಡವರು, ದುರ್ಬಲರು ಹಾಗೂ ಹಣ, ಜನಬಲ ಅಥವಾ ಪ್ರಭಾವ ಇಲ್ಲದವರ ಕೆಲಸಗಳನ್ನು ಪ್ರಾಮಾಣಿಕವಾಗಿ ಮಾಡಿಕೊಡುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ.

ಇಂದು ಸ್ವೀಕರಿಸಿದ ಅರ್ಜಿಗಳನ್ನು ಸಂಬಂಧಿಸಿದ ಇಲಾಖೆಗೆ ತಕ್ಷಣವೇ ಕಳುಹಿಸಿ ಪರಿಹಾರ ನೀಡಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಚಿಕ್ಕೋಡಿ ಉಪವಿಭಾಗಾಧಿಕಾರಿ ಸುಭಾಸ ಸಂಪಗಾವಿ, ತಾಲೂಕಾ ದಂಡಾಧಿಕಾರಿ ಸಿದರಾಯ ಭೋಸಗಿ, ಪಂಚ ಗ್ಯಾರಂಟಿ ಯೋಜನೆ ಅಧ್ಯಕ್ಷ ಸಿದ್ಧಾರ್ಥ ಸಿಂಗೆ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ದತ್ತಾ ವಾಸ್ಟರ್, ಪುರಸಭೆ ಅಧ್ಯಕ್ಷ ಶಿವಲೀಲಾ ಬುಟಾಳಿ, ಉಪಾಧ್ಯಕ್ಷ ಭುವನೇಶ್ವರಿ ಯಕ್ಕಂಚಿ, ಸೇರಿದಂತೆ ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಸಿಎಂ ಡಿಕೆಶಿ ಸೂಚನೆ ಬೆನ್ನಲ್ಲೇ ಬೆಂಗಳೂರಿನಲ್ಲಿ ವಿಶೇಷ ಕಾರ್ಯಾಚರಣೆ । 85 ತಂಡಗಳ ರಚನೆ । ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ನಿರ್ದೇಶನ

## 100 ಬಾಲಕಾರ್ಮಿಕರನ್ನು ರಕ್ಷಿಸಿದ ಪೊಲೀಸರು!





ಬೆಂಗಳೂರು: ನಗರದ ವಿವಿಧ ಸಂಸ್ಥೆಗಳಲ್ಲಿ ಬಾಲಕಾರ್ಮಿಕ ಪದ್ಧತಿಯಲ್ಲಿ ತೊಡಗಿಸಿಕೊಂಡಿದ್ದ ಶಂಕೆಯ ಮೇರೆಗೆ 100ಕ್ಕೂ ಹೆಚ್ಚು ಮಕ್ಕಳನ್ನು ಶನಿವಾರ ನಡೆದ ವಿಶೇಷ ಕಾರ್ಯಾಚರಣೆಯೊಂದರಲ್ಲಿ ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರ ನಿರ್ದೇಶನದ ಮೇರೆಗೆ ಬೆಂಗಳೂರು ಪೊಲೀಸರ ಪೂರ್ವ ಮತ್ತು ಈಶಾನ್ಯ ವಿಭಾಗದ ತಂಡಗಳು ಈ ವಿಶೇಷ ಕಾರ್ಯಾಚರಣೆಗಳನ್ನು ನಡೆಸಿದವು ಎಂದು ಅವರು ಹೇಳಿದರು.

ಬಾಲಕಾರ್ಮಿಕ ಪದ್ಧತಿಯನ್ನು ತಡೆಗಟ್ಟುವುದು ಹಾಗೂ ಕೆಲಸದಲ್ಲಿ ತೊಡಗಿರುವ ಮಕ್ಕಳನ್ನು ಗುರುತಿಸಿ ರಕ್ಷಿಸುವುದು ಈ ಕಾರ್ಯಾಚರಣೆಯ ಉದ್ದೇಶವಾಗಿತ್ತು. ಪೊಲೀಸರ ಪ್ರಕಾರ, ಪೂರ್ವ ವಿಭಾಗದ ಎಲ್ಲ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿನ ಗೋದಾಮುಗಳು, ಮಾರುಕಟ್ಟೆಗಳು, ಹೋಟೆಲ್‌ಗಳು, ಲಾಡ್ಜ್‌ಗಳು, ಬೇಕರಿಗಳು, ಬಸ್ ನಿಲ್ದಾಣಗಳು, ರೈಲು ನಿಲ್ದಾಣಗಳು, ಅಪಾರ್ಟ್‌ಮೆಂಟ್‌ಗಳು ಮತ್ತು ನಿರ್ಮಾಣ ಸ್ಥಳಗಳನ್ನು ಪರಿಶೀಲಿಸಲು ಅಧಿಕಾರಿಗಳ ನೇತೃತ್ವದಲ್ಲಿ 85 ತಂಡಗಳನ್ನು ರಚಿಸಲಾಗಿತ್ತು. ಒಟ್ಟು 917 ಸ್ಥಳಗಳನ್ನು ಪರಿಶೀಲಿಸಲಾಯಿತು ಮತ್ತು ಬಾಲಕಾರ್ಮಿಕ ಪದ್ಧತಿಯಲ್ಲಿ ತೊಡಗಿದ್ದ 71 ಮಕ್ಕಳನ್ನು ರಕ್ಷಿಸಲಾಯಿತು. ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಮಕ್ಕಳ ವಯಸ್ಸಿನ ಪರಿಶೀಲನೆ ನಡೆಯುತ್ತಿದೆ. ಖಚಿತಪಡಿಸಿಕೊಂಡ ನಂತರ ಹೆಚ್ಚಿನ ಎಫ್‌ಐಆರ್‌ಗಳನ್ನು (FIR) ದಾಖಲಿಸಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇದೇ ವೇಳೆ, ಈಶಾನ್ಯ ವಿಭಾಗದಲ್ಲಿ ನಡೆಸಿದ ಕಾರ್ಯಾಚರಣೆಯ ಭಾಗವಾಗಿ ಗ್ಯಾರೇಜ್‌ಗಳು, ಮಾರ್ಟ್‌ಗಳು, ದುರಸ್ತಿ ಅಂಗಡಿಗಳು, ಹೋಟೆಲ್‌ಗಳು, ಮಾರುಕಟ್ಟೆಗಳು, ಬಾರ್‌ಗಳು ಮತ್ತು ರೆಸ್ಟೋರೆಂಟ್‌ಗಳು ಸೇರಿದಂತೆ ಸುಮಾರು 295 ಸ್ಥಳಗಳಲ್ಲಿ ಪರಿಶೀಲನೆ ನಡೆಸಲಾಯಿತು. ಈ ಕಾರ್ಯಾಚರಣೆಯ ಸಂದರ್ಭದಲ್ಲಿ 43 ಬಾಲ ಕಾರ್ಮಿಕರನ್ನು ಗುರುತಿಸಿ ರಕ್ಷಿಸಲಾಗಿದೆ ಎಂದು ಮತ್ತೊಬ್ಬ ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಮುಂದಿನ ತನಿಖೆ ನಡೆಯುತ್ತಿದ್ದು, ಬಾಲಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡಿರುವುದು ಕಂಡುಬರುವ ಸಂಬಂಧಪಟ್ಟ ವ್ಯಕ್ತಿಗಳು ಮತ್ತು ಸಂಸ್ಥೆಗಳ ವಿರುದ್ಧ ಅಗತ್ಯ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

### ಸಾರ್ವಜನಿಕರ ಸಹಕಾರ ಅತ್ಯಗತ್ಯ

ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸಾರ್ವಜನಿಕರ ಸಹಕಾರ ಅತ್ಯಗತ್ಯ. ಮಕ್ಕಳ ಹಕ್ಕುಗಳು, ಶಿಕ್ಷಣ, ಸುರಕ್ಷತೆ ಮತ್ತು ಉತ್ತಮ ಭವಿಷ್ಯದ ಹಕ್ಕನ್ನು ರಕ್ಷಿಸುವುದು ನಮ್ಮೆಲ್ಲರ ಸಾಮೂಹಿಕ ಜವಾಬ್ದಾರಿಯಾಗಿದೆ ಎಂದು

■ ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.





## ಶಾಸಕರೆ ನಾಟಕ ನಿಲ್ಲಿಸಿ, ರೈತರ ಪರ ಕೆಲಸ ಮಾಡಿ

### ಮುದ್ದೇಬಿಹಾಳ ಬಂದ್ ಯಶಸ್ವಿ । ಶಾಸಕ ನಾಡಗೌಡರಿಗೆ ಮಾಜಿ ಶಾಸಕ ನಡಹಳ್ಳಿ ಟಾಂಗ್

■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ರೈತರ ಸಂಕಷ್ಟದ ಸಮಯದಲ್ಲೂ ನಾಟಕ ಮಾಡುವುದನ್ನು ನಿಲ್ಲಿಸಿಲ್ಲ. ಜನರು ಈಗ ಎಲ್ಲವನ್ನೂ ಅರ್ಥ ಮಾಡಿಕೊಂಡಿದ್ದಾರೆ. ರೈತರ ಪರವಾಗಿ ಸರ್ಕಾರದ ಮೇಲೆ ಒತ್ತಡ ತರುವ ಬದಲು ಜವಾಬ್ದಾರಿಯನ್ನು ಇನ್ನೊಬ್ಬರ ಮೇಲೆ ಹೊರಿಸುವುದು ಸರಿಯಲ್ಲ ಎಂದು ಮಾಜಿ ಶಾಸಕ, ಬಿಜೆಪಿ ರಾಜ್ಯ ರೈತ ಮೋರ್ಚಾ ಅಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ ಶಾಸಕ ಸಿ.ಎಸ್.ನಾಡಗೌಡ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಪಟ್ಟಣದಲ್ಲಿ ತಾಲೂಕನ್ನು ಬರಪೀಡಿತ ಎಂದು ಘೋಷಿಸಬೇಕೆಂದು ಆಗ್ರಹಿಸಿ ನಡೆದ ಪಟ್ಟಣ ಬಂದ್ ಹಿನ್ನೆಲೆ ಅಂಗಡಿಮುಂಗಟ್ಟುಗಳನ್ನು ಬಂದ್ ಮಾಡಿ ಬೆಂಬಲಿಸಿದ ವ್ಯಾಪಾರಸ್ಥರಿಗೆ ಕೃತಜ್ಞತೆ ಸಲ್ಲಿಸಿ ಅವರು ಮಾತನಾಡಿದರು.

ನಾಡಗೌಡರೆ ಮೂವತ್ತು ವರ್ಷಗಳಿಂದ ನಾಟಕ ಮಾಡುತ್ತಿದ್ದೀರಿ. ಇನ್ನೂ ನಿಮ್ಮ ನಾಟಕ ನಿಂತಿಲ್ಲ. ಶಾಸಕರಾಗಿ ಮೂರೂವರೆ ವರ್ಷ ಪೂರ್ಣಗೊಳಿಸಿದ್ದೀರಿ. ಈ ಅವಧಿಯಲ್ಲಿ ಎಷ್ಟು ಗ್ರಾಮಗಳಿಗೆ ತೆರಳಿ ರೈತರ ಸಮಸ್ಯೆ ಆಲಿಸಿದ್ದೀರಿ? ಎಷ್ಟು ರೈತರ ಹೊಲಗಳಿಗೆ ಭೇಟಿ ನೀಡಿದ್ದೀರಿ? ಎಂದು ನಡಹಳ್ಳಿ ಪ್ರಶ್ನಿಸಿದರು.

ತಾಳಿಕೋಟೆ ಭಾಗದಲ್ಲಿ ರೈತರು 50 ಸಾವಿರ ಎಕರೆ ಬೆಳೆನಷ್ಟಕ್ಕೆ ಪರಿಹಾರ ಹಾಗೂ ರೈತರ 5 ಲಕ್ಷದವರೆಗಿನ ಸಾಲಮನ್ನಾ ಸೇರಿದಂತೆ ವಿವಿಧ ಬೇಡಿಕೆಗಳಿಗಾಗಿ ಹೋರಾಟ ನಡೆಸಿದ್ದಾರೆ. ಆದರೆ ಹೋರಾಟ ಆರಂಭವಾದ ಬಳಿಕ ಹೊಲಕ್ಕೆ ತೆರಳಿ ಬರ ಪರಿಸ್ಥಿತಿ ಪರಿಶೀಲಿಸಿರುವುದು ಯಾವ ರೀತಿಯ ರೈತಪರ ಕಾಳಜಿ? ಎಂದು ಪ್ರಶ್ನಿಸಿದರು.

ಎಂ.ಬಿ.ಪಾಟೀಲರ ಹೆಸರು ಹೇಳಿಕೊಂಡು ಜವಾಬ್ದಾರಿಯಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ. ಸರ್ಕಾರದ ಭಾಗವಾಗಿರುವ ಶಾಸಕರು ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದು ತಾಲೂಕನ್ನು ಬರಪೀಡಿತ ಎಂದು ಘೋಷಣೆ ಮಾಡಿಸಬೇಕು. ಅದು ಸಾಧ್ಯವಾಗದಿದ್ದರೆ ರೈತರ ಪರವಾಗಿ ಧರಣಿ ನಡೆಸಲಿ ಎಂದು ಸವಾಲು ಹಾಕಿದರು.

ಈ ವೇಳೆ ಮುಖಂಡ ಸಿದ್ದರಾಜ ಹೊಳಿ ಮಾತನಾಡಿದರು.

ಹೋರಾಟದ ಹಿನ್ನೆಲೆಯಲ್ಲಿ ಬೆಳಗ್ಗೆಯಿಂದಲೇ ಪಟ್ಟಣದ ವ್ಯಾಪಾರಸ್ಥರು ಸ್ವಯಂಪ್ರೇರಿತರಾಗಿ ಅಂಗಡಿಮುಂಗಟ್ಟುಗಳನ್ನು ಬಂದ್ ಮಾಡಿ ಬೆಂಬಲ ಸೂಚಿಸಿದರು. ಅಟೋ, ಟ್ಯಾಕ್ಸಿ, ಬಸ್ ಸೇರಿದಂತೆ ವಿವಿಧ ವಾಹನಗಳ ಸಂಚಾರವೂ ಸಂಪೂರ್ಣ ಸ್ಥಗಿತಗೊಂಡು ಬಂದ್‌ಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಪರಿಣಾಮವಾಗಿ ಪಟ್ಟಣದ ಪ್ರಮುಖ ವಾಣಿಜ್ಯ ಚಟುವಟಿಕೆಗಳು ಹಾಗೂ ಸಾರಿಗೆ ವ್ಯವಸ್ಥೆ ಸಂಪೂರ್ಣ ಸ್ಥಗಿತಗೊಂಡಿತ್ತು.

ಈ ವೇಳೆ ಬಿಜೆಪಿ ಮಂಡಲದ ಅಧ್ಯಕ್ಷ ಜಗದೀಶ ಪಂಪಣ್ಣವರ, ಮಲಕೇಂದ್ರಗೌಡ ಪಾಟೀಲ, ಮುನ್ನಧಣಿ ನಾಡಗೌಡ, ಹರೀಶ್ ನಾಟೆಕಾರ, ಗಿರೀಶ ಪಾಟೀಲ, ಪರಶುರಾಮ ನಾಲತವಾಡ, ಕೆಂಚಪ್ಪ ಬಿರಾದಾರ, ಗೌರಮ್ಮ ಹುನಗುಂದ ಸೇರಿದಂತೆ ರೈತರು ಭಾಗಿಯಾಗಿದ್ದರು.

ವ್ಹಿಡಿಸಿಸಿ ಬ್ಯಾಂಕ್ ನಿಂದ ಸಾಲ । ವಿಜಯಪುರದಲ್ಲಿ ಶಾಸಕ ಶಿವಾನಂದ ಪಾಟೀಲ ಪ್ರಕಟಣೆ

## ತೋಟದ ಮನೆ ನಿರ್ಮಾಣಕ್ಕೆ ರೂ.20 ಲಕ್ಷವರೆಗೆ ಮನೆ ಸಾಲ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ವ್ಹಿಡಿಸಿಸಿ ಬ್ಯಾಂಕ್) ಜಿಲ್ಲೆಯ ಗ್ರಾಮೀಣ ಭಾಗದ ರೈತರಿಗೆ ತಾವು ವ್ಯವಸಾಯ ಮಾಡುವ ತೋಟದಲ್ಲಿ ಸ್ವಂತ ಮನೆ ನಿರ್ಮಿಸಿಕೊಳ್ಳಲು ಮನೆ ಸಾಲ ನೀಡುವ ಮಹತ್ವಾಕಾಂಕ್ಷಿ ಯೋಜನೆ ಜಾರಿಗೊಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರು, ಮಾಜಿ ಸಚಿವರು ಹಾಗೂ ಬಸವನಬಾಗೇವಾಡಿ ಕ್ಷೇತ್ರದ ಶಾಸಕರಾದ ಶಿವಾನಂದ ಎಸ್. ಪಾಟೀಲ ತಿಳಿಸಿದ್ದಾರೆ.

ಶನಿವಾರ ಬ್ಯಾಂಕಿನ ಪ್ರಧಾನ ಕಚೇರಿಯಲ್ಲಿ 107ನೇ ವಾರ್ಷಿಕ ಮಹಾಸಭೆಯ ಹಿನ್ನೆಲೆಯಲ್ಲಿ ಬ್ಯಾಂಕಿನ ಸಾಧನೆಗಳ ಕುರಿತು ವಿವರಿಸಲು ಕರೆಯಲಾಗಿದ್ದ ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿ, ರೈತರ ಬೇಡಿಕೆಗಳಿಗೆ ಸ್ಪಂದಿಸಿ ಈ ಯೋಜನೆ ಜಾರಿಗೊಳಿಸಲಾಗಿದೆ ಎಂದರು.

ಈ ಯೋಜನೆಯಡಿ ಪ್ರತಿಯೊಬ್ಬ ರೈತರಿಗೆ ಗರಿಷ್ಠ 20 ಲಕ್ಷ ರೂ.ಗಳವರೆಗೆ ಸಾಲ ನೀಡಲಾಗುತ್ತಿದ್ದು, ಇದುವರೆಗೆ 202 ರೈತರಿಗೆ ಬ್ಯಾಂಕು 27.64 ಕೋಟಿ ರೂ. ಸಾಲ ಮಂಜೂರು ಮಾಡಿದೆ ಎಂದು ಅವರು ಹೇಳಿದರು. ಜಿಲ್ಲೆಯ ಎಲ್ಲ ರೈತರಿಗೂ ಮನೆ ಸಾಲ ನೀಡಲು ಬ್ಯಾಂಕು ಸಮರ್ಥವಾಗಿದ್ದು, ವಾರ್ಷಿಕ ಶೇ. 10 ರೂ. ಬಡ್ಡಿದರದಲ್ಲಿ ಬ್ಯಾಂಕು ಮನೆ ನಿರ್ಮಿಸಿಕೊಳ್ಳಲು ಸಾಲ ನೀಡುವುದು. ರೈತರು ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಶಾಸಕ ಶಿವಾನಂದ ಪಾಟೀಲ ಕೋರಿದರು. ಇದೇ ರೀತಿ ಬ್ಯಾಂಕು ಹೈನುಗಾರಿಕೆ, ಒಣದ್ರಾಕ್ಷಿ ತಯಾರಿಕೆಗೂ ರೈತರಿಗೆ ಸಾಲ ನೀಡಿ ನೆರವಾಗುತ್ತ ಬಂದಿದೆ. 3.55 ಲಕ್ಷ ರೈತರಿಗೆ 2118 ಕೋಟಿ ರೂ. ಸಾಲ ನೀಡಿದ್ದು, ಬ್ಯಾಂಕಿನ ಇತಿಹಾಸದಲ್ಲಿ ಇದು ದಾಖಲಾರ್ಹ ಸಾಧನೆಯಾಗಿದೆ. ಕೃಷಿ ಸಾಲ ನೀಡುವಲ್ಲಿ ವಿಜಯಪುರ ಡಿಸಿಸಿ ಬ್ಯಾಂಕ್ ಮುಂಚೂಣಿಯಲ್ಲಿದೆ ಎಂದು ಹೇಳಲು ತಮಗೆ ತುಂಬಾ ಸಂತೋಷವೆನಿಸುತ್ತದೆ ಎಂದು ಅವರು ನುಡಿದರು.

ಅದೇ ರೀತಿ ಬ್ಯಾಂಕು ಇದುವರೆಗೆ ರಾಜ್ಯದ 37 ಸಹಕಾರಿ ಸಕ್ಕರೆ ಕಾರಖಾನೆಗಳ ಸ್ಥಾಪನೆಗಾಗಿ ಯೋಜನಾ ವೆಚ್ಚ ಮತ್ತು ಸಮರ್ಪಕ ನಿರ್ವಹಣೆಗಾಗಿ ಅವಧಿ ಸಾಲ ಹಾಗೂ ದುಡಿಯುವ ಬಂಡವಾಳ ಸಾಲಗಳನ್ನು ನೀಡಿದ್ದು, ಈ ವರ್ಷಾಂತ್ಯಕ್ಕೆ 21 ಸಕ್ಕರೆ ಕಾರಖಾನೆಗಳಿಂದ ಒಟ್ಟು 881.57 ಕೋಟಿ ರೂ.ಬರತಕ್ಕ ಸಾಲ ಬಾಕಿ ಇದೆ. ಅತೀ ಹೆಚ್ಚು ಸಕ್ಕರೆ ಕಾರಖಾನೆಗಳಿಗೆ ಸಾಲ ನೀಡಿದ ಹೆಗ್ಗಳಿಕೆ ಈ ಬ್ಯಾಂಕಿಗಿದೆ ಎಂದು ಅವರು ಹೇಳಿದರು.

ಒಂದು ಕಾಲದಲ್ಲಿ ದೇಶದಲ್ಲಿಯೇ ನಂಬರ ಒನ್ ಸ್ಥಾನದಲ್ಲಿದ್ದ ಜಿಲ್ಲೆಯ ನಂದಿ ಸಹಕಾರಿ ಸಕ್ಕರೆ ಕಾರಖಾನೆಗೂ ಬ್ಯಾಂಕು ಸಾಲ ನೀಡಿದೆ. ಆದರೆ ಈ ಸಕ್ಕರೆ ಕಾರಖಾನೆಯ ಈಗಿನ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ. ಈ ಕಾರಖಾನೆಗೆ ಈ ಅವಸ್ಥೆ ಬರಬಾರದಾಗಿತ್ತು. ನಾವು ಈ ಕಾರಖಾನೆಗೆ ಸಾಲ ನೀಡದೇ ಹೋಗಿದ್ದರೆ ಎರಡು ವರ್ಷಗಳ ಹಿಂದೆಯೇ ಕಾರಖಾನೆ ಮುಚ್ಚಿ ಹೋಗುತ್ತಿತ್ತು ಎಂದು ಅವರು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬ್ಯಾಂಕಿನ ಉಪಾಧ್ಯಕ್ಷ ರಾಜಶೇಖರ ಗುಡದಿನ್ನಿ, ನಿರ್ದೇಶಕರಾದ ಬಿ.ಎಸ್.ಪಾಟೀಲ (ಯಾಳಗಿ), ಕಲ್ಲನಗೌಡ ಪಾಟೀಲ, ಶೇಖರ ದಳವಾಯಿ, ಹಣಮಂತರಾಯಗೌಡ ಪಾಟೀಲ, ಶ್ರೀಮತಿ ಸಂಯುಕ್ತಾ ಎಸ್. ಪಾಟೀಲ, ಗುರುಶಾಂತ ನಿಡೋಣಿ, ಸುರೇಶ ಬಿರಾದಾರ, ಚಂದ್ರಶೇಖರ ಪಾಟೀಲ, ಅರವಿಂದ ಪೂಜಾರಿ, ವೃತ್ತಿಪರ ನಿರ್ದೇಶಕರಾದ ಎಸ್.ಎಸ್. ಜಹಾಗೀರದಾರ, ಎಂ.ಸಿ.ಗುಂದಗಿ, ಎಸ್.ಎಸ್

ಸಿಂಧೆ, ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಎ.ಢವಳಗಿ, ಆಡಳಿತ ಮಂಡಳಿ ಸಲಹೆಗಾರರಾದ ಜೆ.ಕೊಟ್ರೇಶಿ, ಡಿಡಿಎಂ ನಬಾ ವಿಶೇಷ ಆಹ್ವಾನಿತರಾದ ವಿಕಾಸ ರಾಠೋಡ, ಸಹಕಾರ ಸಂಘಗಳ ಉಪನಿಬಂಧಕಿ ಶ್ರೀಮತಿ ಎಸ್.ಕೆ.ಭಾಗ್ಯಶ್ರೀ, ಬ್ಯಾಂಕಿನ ಅಧಿಕಾರಿಗಳಾದ ಸುರೇಶ ಪಾಟೀಲ, ಸತೀಶ ಪಾಟೀಲ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ಮೂರ್ತಿ, ಹೂವು-ಹಣ್ಣು, ಪೂಜಾ ಸಾಮಗ್ರಿ ಖರೀದಿ ಜೋರು । ವ್ಯಾಪಾರಿಗಳಲ್ಲಿ ಹೊಸ ನಿರೀಕ್ಷೆ

## ಗಣೇಶನ ಆಗಮನಕ್ಕೆ ಮಾರುಕಟ್ಟೆಗೆ ಹೊಸ ಕಳೆ!

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಸಿದ್ರಾಮ್ ಎಮ್ ಇಟ್ಟಿ

ಬಾಗಲಕೋಟೆ (ಜಮಖಂಡಿ) 12-02 : ವಿಘ್ನವಿನಾಶಕ ಶ್ರೀ ಗಣೇಶನ ಆಗಮನಕ್ಕೆ ಕ್ಷಣಗಣನೆ ಆರಂಭವಾಗುತ್ತಿದ್ದಂತೆ ನಗರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಮಾರುಕಟ್ಟೆಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣಗೊಂಡಿದೆ. ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ವಿವಿಧ ಬಗೆಯ ಗಣೇಶ ಮೂರ್ತಿಗಳು, ಹೂವು-ಹಣ್ಣು, ಪೂಜಾ ಸಾಮಗ್ರಿ ಹಾಗೂ ಅಲಂಕಾರಿಕ ವಸ್ತುಗಳ ಖರೀದಿ ಭರಾಟೆ ಜೋರಾಗಿದ್ದು, ವ್ಯಾಪಾರ ವಹಿವಾಟು ಗರಿಗೆದರಿದೆ.

ಹಬ್ಬದ ಸಿದ್ಧತೆಯಲ್ಲಿ ಮನೆಮಂದಿ, ಯುವಕರು ಹಾಗೂ ಗಣೇಶೋತ್ಸವ ಮಂಡಳಿಗಳು ತೊಡಗಿಕೊಂಡಿದ್ದು, ಮಾರುಕಟ್ಟೆಯತ್ತ ಜನರ ಹೆಜ್ಜೆ ಹೆಚ್ಚಾಗಿದೆ. ಬೆಳಗ್ಗೆಯಿಂದಲೇ ಗಣೇಶ ಮೂರ್ತಿಗಳ ಮಳಿಗೆ, ಹೂವು-ಹಣ್ಣು ಅಂಗಡಿಗಳು ಹಾಗೂ ಪೂಜಾ ಸಾಮಗ್ರಿ ಮಾರಾಟದ ಅಂಗಡಿಗಳಲ್ಲಿ ಗ್ರಾಹಕರ ದಟ್ಟಣೆ ಕಂಡುಬರುತ್ತಿದೆ.

**ಬಣ್ಣಬಣ್ಣದ ಗಣೇಶ ಮೂರ್ತಿಗಳ ಆಕರ್ಷಣೆ**

ಈ ಬಾರಿ ಮಾರುಕಟ್ಟೆಯಲ್ಲಿ ವಿವಿಧ ಗಾತ್ರ, ವಿನ್ಯಾಸ ಹಾಗೂ ಭಂಗಿಯ ಗಣೇಶ ಮೂರ್ತಿಗಳು ಗ್ರಾಹಕರ ಗಮನ ಸೆಳೆಯುತ್ತಿವೆ. ಮನೆಗಳಲ್ಲಿ ಪ್ರತಿಷ್ಠಾಪಿಸುವ ಪುಟ್ಟ ಮೂರ್ತಿಗಳಿಂದ ಹಿಡಿದು ಸಾರ್ವಜನಿಕ ಗಣೇಶೋತ್ಸವ ಮಂಡಳಿಗಳಿಗಾಗಿ ಬೃಹತ್ ಮೂರ್ತಿಗಳವರೆಗೆ ಹಲವು ಬಗೆಯ ಮೂರ್ತಿಗಳು ಮಾರಾಟಕ್ಕೆ ಬಂದಿವೆ.

ಮಕ್ಕಳು ಹಾಗೂ ಯುವಕರನ್ನು ಆಕರ್ಷಿಸುವ ರೀತಿಯಲ್ಲಿ ವಿವಿಧ ವಿನ್ಯಾಸಗಳಲ್ಲಿ ಸಿದ್ಧಪಡಿಸಿರುವ ಮೂರ್ತಿಗಳಿಗೆ ಬೇಡಿಕೆ ಹೆಚ್ಚಾಗಿದೆ. ಪರಿಸರದ ಬಗ್ಗೆ ಕಾಳಜಿ ಹೊಂದಿರುವವರು ಮಣ್ಣಿನ ಹಾಗೂ ಪರಿಸರ ಸ್ನೇಹಿ ಗಣೇಶ ಮೂರ್ತಿಗಳತ್ತಲೂ ಆಸಕ್ತಿ ತೋರುತ್ತಿದ್ದಾರೆ.

**ಹೂವು-ಹಣ್ಣಿನ ವ್ಯಾಪಾರಕ್ಕೂ ಚೇತರಿಕೆ**

ಗಣೇಶನ ಪೂಜೆಗೆ ಅಗತ್ಯವಿರುವ ಹೂವು, ಗರಿಕೆ, ಹೂವಿನ ಹಾರ, ಬಾಳೆಕಂದು, ತೆಂಗಿನಕಾಯಿ ಹಾಗೂ ವಿವಿಧ ಹಣ್ಣುಗಳ ಖರೀದಿ ಹೆಚ್ಚಾಗಿದೆ. ಹಬ್ಬದ ದಿನ ಸಮೀಪಿಸುತ್ತಿದ್ದಂತೆ ಬೇಡಿಕೆ ಇನ್ನಷ್ಟು ಹೆಚ್ಚುವ ಸಾಧ್ಯತೆ ಇರುವುದರಿಂದ ಹೂವು-ಹಣ್ಣು ವ್ಯಾಪಾರಿಗಳು ಹೆಚ್ಚಿನ ಪ್ರಮಾಣದಲ್ಲಿ ಸಾಮಗ್ರಿ ತರಿಸಿಕೊಳ್ಳುತ್ತಿದ್ದಾರೆ.

**ಮಖರ, ಲೈಟಿಂಗ್‌ಗೂ ಬೇಡಿಕೆ**

ಗಣೇಶ ಮೂರ್ತಿ ಪ್ರತಿಷ್ಠಾಪಿಸುವ ಸ್ಥಳದ ಅಲಂಕಾರಕ್ಕೆ ವಿಶೇಷ ಒತ್ತು ನೀಡಲಾಗುತ್ತಿದೆ. ಬಣ್ಣಬಣ್ಣದ ವಿದ್ಯುತ್ ದೀಪಗಳು, ಮಖರ, ಹೂವಿನ ಅಲಂಕಾರ, ಬಟ್ಟೆ, ಕಾಗದದ ಅಲಂಕಾರಿಕ ವಸ್ತುಗಳು ಹಾಗೂ ವಿವಿಧ ಅಲಂಕಾರ ಸಾಮಗ್ರಿಗಳ ಮಾರಾಟವೂ ಚುರುಕಾಗಿದೆ. ಮನೆಗಳಲ್ಲಿ ಸರಳವಾಗಿ ಗಣೇಶನನ್ನು ಪ್ರತಿಷ್ಠಾಪಿಸುವವರಿಂದ ಹಿಡಿದು ಸಾರ್ವಜನಿಕ ಗಣೇಶೋತ್ಸವ ಆಯೋಜಿಸುವ ಮಂಡಳಿಗಳವರೆಗೆ ತಮ್ಮದೇ ಆದ ರೀತಿಯಲ್ಲಿ ಅಲಂಕಾರಕ್ಕೆ ಸಿದ್ಧತೆ ನಡೆಸುತ್ತಿರುವುದು ಕಂಡುಬರುತ್ತಿದೆ.

### ಮಾರುಕಟ್ಟೆಯಲ್ಲೇ ಹಬ್ಬದ ಸಂಭ್ರಮ

ಗಣೇಶ ಮೂರ್ತಿಗಳ ಸಾಲು, ಹೂವು-ಹಣ್ಣುಗಳ ರಾಶಿ, ಬಣ್ಣಬಣ್ಣದ ಅಲಂಕಾರಿಕ ಸಾಮಗ್ರಿಗಳು ಹಾಗೂ ಖರೀದಿಗೆ ಆಗಮಿಸುತ್ತಿರುವ ಜನರಿಂದ ಮಾರುಕಟ್ಟೆ ಪ್ರದೇಶಗಳಲ್ಲಿ ಹಬ್ಬದ ಸಂಭ್ರಮ ಮನೆಮಾಡಿದೆ. ಸಾಮಾನ್ಯ ದಿನಗಳಿಗಿಂತ ವ್ಯಾಪಾರ ಚಟುವಟಿಕೆ ಹೆಚ್ಚಾಗಿರುವುದು ಗೋಚರಿಸುತ್ತಿದೆ.



### ಸಣ್ಣ ವ್ಯಾಪಾರಿಗಳಿಗೆ ಹಬ್ಬದ 'ಬೋನಸ್'

ಗಣೇಶ ಚತುರ್ಥಿ ಹಬ್ಬವು ಭಕ್ತಿಯ ಜತೆಗೆ ಸ್ಥಳೀಯ ಸಣ್ಣ ವ್ಯಾಪಾರಿಗಳಿಗೂ ಆರ್ಥಿಕ ಚಟುವಟಿಕೆಯ ಪ್ರಮುಖ ಸಂದರ್ಭವಾಗಿದೆ. ಗಣೇಶ ಮೂರ್ತಿ ತಯಾರಕರು, ಹೂವು-ಹಣ್ಣು ವ್ಯಾಪಾರಿಗಳು, ಪೂಜಾ ಸಾಮಗ್ರಿ ಮಾರಾಟಗಾರರು, ಅಲಂಕಾರಿಕ ವಸ್ತುಗಳ ವ್ಯಾಪಾರಿಗಳು ಹಾಗೂ ಬೀದಿ ಬದಿ ವ್ಯಾಪಾರಿಗಳು ಹಬ್ಬದ ವಹಿವಾಟಿನ ನಿರೀಕ್ಷೆಯಲ್ಲಿದ್ದಾರೆ. ಹಬ್ಬದ ಮುನ್ನಾದಿನ ಮತ್ತು ಗಣೇಶ ಚತುರ್ಥಿಯಂದು ಖರೀದಿ ಇನ್ನಷ್ಟು ಹೆಚ್ಚುವ ನಿರೀಕ್ಷೆಯಿದ್ದು, ಉತ್ತಮ ವ್ಯಾಪಾರವಾಗುವ ವಿಶ್ವಾಸವನ್ನು ವ್ಯಾಪಾರಿಗಳು ವ್ಯಕ್ತಪಡಿಸುತ್ತಿದ್ದಾರೆ.

# ಭಾರತದಕ್ಷಿಣ ಆಫ್ರಿಕಾ ಆರ್ಥಿಕ ಸಹಭಾಗಿತ್ವಕ್ಕೆ KSMCA ಒಡಂಬಡಿಕೆ



■ ಉದಯರಶ್ಮಿ ದಿನಪತ್ರಿಕೆ

ನವದೆಹಲಿ: ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (KSMCA) ಸಂಸ್ಥೆಯು ಪ್ರಧಾನಮಂತ್ರಿ ಸಂಗ್ರಹಾಲಯ, ತೀನ್ ಮೂರ್ತಿ ಭವನ, ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ ಸತೀಶ್ ಕೃಷ್ಣ ಸೈಲ್, ಶಾಸಕರು, ಕಾರವಾರ ಅವರ ಮಾರ್ಗದರ್ಶನದಲ್ಲಿ, BRICS Women's Business Alliance South Africa Chapter (BRICS WBA-SA) ಹಾಗೂ BRICS Chamber of Commerce and Industry (BRICS CCI) ಜೊತೆ ತ್ರಿಪಕ್ಷೀಯ Memorandum of Coordination (MoC)ಗೆ ಸಹಿ ಮಾಡಿದೆ.

ಈ MoCUÉ KSMCAಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಿ. ಆನಂದ್, BRICS CCIಯ ಅಧ್ಯಕ್ಷರಾದ ಶ್ರೀ ಸಮೀಪ್ ಶಾಸ್ತ್ರಿ ಹಾಗೂ BRICS Women's Business Alliance South Africaಯ ಕಾರ್ಯಕಾರಿ ಅಧ್ಯಕ್ಷರಾದ HRH ಪ್ರಿನ್ಸೆಸ್ ಲೆಬೊಗಾಂಗ್ ಜುಲು ಅವರು ಸಹಿ ಹಾಕಿದರು.

ಈ ಸಹಕಾರವು ಭಾರತ ದಕ್ಷಿಣ ಆಫ್ರಿಕಾ BRICS Creative Economy Partnership ಅನ್ನು ಬಲಪಡಿಸುವ ಉದ್ದೇಶ ಹೊಂದಿದ್ದು, "Screen to Market" ಅನ್ನು ಪ್ರಮುಖ ಈlagship Implementation Programme ಆಗಿ ಗುರುತಿಸಲಾಗಿದೆ.

ಈ ಸಹಭಾಗಿತ್ವದ ಮೂಲಕ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವೆ ಸೃಜನಶೀಲ ಆರ್ಥಿಕತೆ, ಮಾಧ್ಯಮ, ಮನರಂಜನೆ, ಡಿಜಿಟಲ್ ಕಂಟೆಂಟ್, ಉದ್ಯಮಶೀಲತೆ,

ನವೋದ್ಯಮ, ವ್ಯಾಪಾರ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆ ಪ್ರವೇಶ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರವನ್ನು ವೃದ್ಧಿಸುವ ಗುರಿಯನ್ನು ಹೊಂದಲಾಗಿದೆ. ಸೃಜನಶೀಲ ವೃತ್ತಿಪರರು, ಉದ್ಯಮಿಗಳು, ಸಂಸ್ಥೆಗಳು ಹಾಗೂ ವ್ಯವಹಾರಗಳಿಗೆ ಎರಡೂ ದೇಶಗಳ ಮಾರುಕಟ್ಟೆಗಳಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸುವ ನಿಟ್ಟಿನಲ್ಲಿ ಗಡಿ ದಾಟಿದ ಸೃಜನಶೀಲ ಸಹಭಾಗಿತ್ವ, ಪ್ರತಿಭೆ ಮತ್ತು ಜ್ಞಾನ ವಿನಿಮಯ, ಉದ್ಯಮ ಸಂಪರ್ಕ, ಮಾರುಕಟ್ಟೆ ಅಭಿವೃದ್ಧಿ ಹಾಗೂ ಹೂಡಿಕೆ ಅವಕಾಶಗಳನ್ನು ಅನ್ವೇಷಿಸಲಾಗುವುದು. "Screen to Market" ಮೂಲಕ ಆಲೋಚನೆಗಳು, ಪ್ರತಿಭೆ ಮತ್ತು ಸೃಜನಶೀಲ ಉದ್ಯಮಗಳನ್ನು ಹೊಸ ಮಾರುಕಟ್ಟೆಗಳು ಹಾಗೂ ಜಾಗತಿಕ ಅವಕಾಶಗಳೊಂದಿಗೆ ಸಂಪರ್ಕಿಸುವ ವೇದಿಕೆಯನ್ನು ರೂಪಿಸುವ ಉದ್ದೇಶ ಹೊಂದಲಾಗಿದೆ. ಇದರ ಮೂಲಕ ಸೃಜನಶೀಲ ಕ್ಷೇತ್ರವನ್ನು ಕೇವಲ ವಿಷಯ ನಿರ್ಮಾಣಕ್ಕೆ ಸೀಮಿತಗೊಳಿಸದೆ, ವಾಣಿಜ್ಯೀಕರಣ, ಉದ್ಯಮ ಅಭಿವೃದ್ಧಿ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆ ಪ್ರವೇಶದತ್ತ ಕೊಂಡೊಯ್ಯುವ ಪ್ರಯತ್ನ ಮಾಡಲಾಗುವುದು.

ಈ ಸಹಕಾರವು BRICS ವೇದಿಕೆಯ ಮೂಲಕ ಭಾರತದಕ್ಷಿಣ ಆಫ್ರಿಕಾ ನಡುವಿನ ವ್ಯಾಪಾರಿಕ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ. ಕರ್ನಾಟಕ ಸರ್ಕಾರದ ಉದ್ಯಮವಾದ KSMCA, ತನ್ನ ಮಾರ್ಕೆಟಿಂಗ್ ಕಮ್ಯುನಿಕೇಷನ್, ಜಾಹೀರಾತು ಹಾಗೂ ತಂತ್ರಾತ್ಮಕ ಸಂಪರ್ಕ ಕ್ಷೇತ್ರದ ಪರಿಣತಿಯನ್ನು ಬಳಸಿಕೊಂಡು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೊಸ ವೇದಿಕೆಗಳು ಮತ್ತು ಸಹಭಾಗಿ–ತ್ವಗಳನ್ನು ರೂಪಿಸಲು ಈ ಸಹಕಾರದ ಮೂಲಕ ಮುಂದಾಗಲಿದೆ.

ಈ ತ್ರಿಪಕ್ಷೀಯ MoC, BRICS ನೇತೃತ್ವದ ಸೃಜನಶೀಲ ಮತ್ತು ಆರ್ಥಿಕ ಸಹಭಾಗಿತ್ವಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದ್ದು, ಗಡಿಗಳನ್ನು ಮೀರಿ ಜನರು, ಆಲೋಚನೆಗಳು, ಪ್ರತಿಭೆ ಮತ್ತು ಉದ್ಯಮಗಳನ್ನು "Screen to Market" ಮಾಡುವ ಸಾಮಾನ್ಯ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ

# ರೈತ ಸಂಘದ ಧರಣಿ ಸತ್ಯಾಗ್ರಹಕ್ಕೆ ವಕೀಲರ ಬೆಂಬಲ




■ ಉದಯರಶ್ಮಿ ದಿನಪತ್ರಿಕೆ


**ತಾಳಿಕೋಟೆ ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ನಡೆದ ಅಹೋರಾತ್ರಿ ಧರಣಿ ಸತ್ಯಾಗ್ರಹ**

ತಾಳಿಕೋಟೆ: ಮಳೆ ಕೊರತೆಯಿಂದಾಗಿ ಬೆಳೆಗಳು ಹಾನಿಗೊಳಗಾಗಿ ರೈತರು ಸಂಕಷ್ಟಕ್ಕೆ ಸಿಲುಕಿರುವ ಹಿನ್ನೆಲೆಯಲ್ಲಿ ತಾಳಿಕೋಟೆ, ದೇವರ ಹಿಪ್ಪರಗಿ, ಮುದ್ದೇಬಿಹಾಳ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವಂತೆ ಆಗ್ರಹಿಸಿ ರೈತರು ಕಳೆದ ಒಂಬತ್ತು ದಿನಗಳಿಂದ ನಡೆಸುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಸರ್ಕಾರ ಕೂಡಲೇ ಸ್ಪಂದಿಸಬೇಕು ಎಂದು ನ್ಯಾಯವಾದಿ ಪ್ರಭಾಕರ ಗುಡಗುಂಟಿ ಒತ್ತಾಯಿಸಿದರು. ಪಟ್ಟಣದ ಪ್ರವಾಸಿ ಮಂದಿರದ ಬಳಿ ಅಖಂಡ ಕರ್ನಾಟಕ ರೈತ ಸಂಘದ ನೇತೃತ್ವದಲ್ಲಿ ರೈತರು ನಡೆಸುತ್ತಿರುವ 9ನೇ ದಿನದ ಅಹೋರಾತ್ರಿ ಧರಣಿ ಸ್ಥಳಕ್ಕೆ ತಾಲೂಕಿನ ಎಲ್ಲ ನ್ಯಾಯವಾದಿಗಳು ಆಗಮಿಸಿ ಧರಣಿ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸಿದ ನಂತರ ಮಾತನಾಡುತ್ತಿದ್ದ ಅವರು, ರೈತರು ತಮ್ಮ ಕುಟುಂಬ ಹಾಗೂ ವೈಯಕ್ತಿಕ ಕೆಲಸಗಳನ್ನು ಬದಿಗೊತ್ತಿ ಹಗಲು–ರಾತ್ರಿ ಧರಣಿ ನಡೆಸುತ್ತಿರುವುದು ಸರ್ಕಾರ ಹಾಗೂ ಜನಪ್ರತಿನಿಧಿಗಳ ಗಮನಕ್ಕೆ ಬಂದಿದೆ ಆದರೂ ಸ್ಪಂದಿಸದಿರುವದು ಸರಿಯಲ್ಲವೆಂದು ಹೇಳಿದ ಅವರುರೈತರಜಮೀನುಗಳಲ್ಲಿನವಾಸ್ತವಪರಿಸ್ಥಿತಿ, ಬೆಳೆಗಳ ಸ್ಥಿತಿ ಹಾಗೂ ಕೃಷಿಗಾಗಿ ಮಾಡಿರುವ ಬಂಡವಾಳದ ನಷ್ಟವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬೇಕು. ರೈತರು ವೈಯಕ್ತಿಕ ಹಿತಕ್ಕಾಗಿ ಹೋರಾಟ ನಡೆಸುತ್ತಿಲ್ಲ. ಇಡೀ ರೈತ ಸಮುದಾಯದ ಪರವಾಗಿ ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಿದ್ದಾರೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ವಾಸ್ತವ ಪರಿಸ್ಥಿತಿಯನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು ರೈತರ ಹೋರಾಟಕ್ಕೆ ಯಾವುದೇ ಜಾತಿ, ಪಕ್ಷ ಅಥವಾ ವೈಯಕ್ತಿಕ ಭೇದವಿಲ್ಲ. ರೈತ ಎಂಬುದೇ ನಮ್ಮ ಏಕೈಕ ಗುರುತು. ರೈತರು ತಮ್ಮ ಕುಟುಂಬವನ್ನು ಬಿಟ್ಟು ಹಗಲು–ರಾತ್ರಿ ಧರಣಿ ನಡೆಸುತ್ತಿರುವ ಅವರ ನೋವು ಮತ್ತು ಸಂಕಷ್ಟವನ್ನು ಅರ್ಥಮಾಡಿಕೊಂಡು ಪ್ರತಿಯೊಬ್ಬರೂ ಹೋರಾಟಕ್ಕೆ ಬೆಂಬಲ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಹಿರಿಯ ನ್ಯಾಯವಾದಿಗಳಾದ ಎಂ.ಆರ್. ಪಾಟೀಲ, ಎಸ್.ಬಿ. ನಾರಿ, ಎಸ್.ಎಂ. ಕಿಣಗಿ, ಶ್ರೀಶೈಲ ಹಾಲಣ್ಣವರ, ಕಾಶೀನಾಥ ಕಟ್ಟಿಮನಿ, ಸಂತೋಷ ಯಲಗೋಡ, ಚಂದ್ರು ಛಲವಾದಿ, ಆರ್. ಎನ್.ಪಾಟೀಲ, ಬಸವರಾಜ ಕಟ್ಟಿಮನಿ, ಎಂ.ಬಿ.ಅಸ್ಕಿ, ಹಾಗೂ ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ, ಜಿಲ್ಲಾ ಉಪಾಧ್ಯಕ್ಷ ರಾಮನಗೌಡ ಹಾದಿಮನಿ, ತಾಲೂಕಾ ಅಧ್ಯಕ್ಷ ಬಾಲಪ್ಪಗೌಡ ಲಿಂಗದಳ್ಳಿ, ಮಲ್ಲನಗೌಡ ಬಿರಾದಾರ, ನಾನಾಗೌಡ ಮುದುನೂರ, ಮಾಂತಗೌಡ ಮುದುನೂರ, ಹನುಮಂತರಾಯ ಹಾಲರಡ್ಡಿ, ಬಸನಗೌಡ ಬನ್ನೆಪ್ಪ, ಶಿವರಾಜ ಪಾಟೀಲ, ಬಸನಗೌಡ ಬಿರಾದಾರ, ಶಾಂತಗೌಡ ಬಿರಾದಾರ, ಅರುಣ–ಕುಮಾರ ಬಿರಾದಾರ, ಸಂಗನಗೌಡ ಟಕ್ಕಳಕಿ, ಬಸನಗೌಡ ಟಕ್ಕಳಕಿ, ರಾಮನಗೌಡ ಟಕ್ಕಳಕಿ, ಸೋಮನಗೌಡ ಯಳವಾರ, ಅಣ್ಣಪ್ಪಗೌಡ ಬಿರಾದಾರ ಮೊದಲಾದವರು ಉಪಸ್ಥಿತರಿದ್ದರು.

# ಬರಪೀಡಿತ ತಾಲೂಕು ಘೋಷಣೆ ಶೇ.100 ಖಚಿತ

■ ಉದಯರಶ್ಮಿ ದಿನಪತ್ರಿಕೆ



ತಾಳಿಕೋಟೆ: ಮಳೆ ಕೊರತೆಯಿಂದಾಗಿ ರೈತರು ಸಂಕಷ್ಟದಲ್ಲಿರುವ ಹಿನ್ನೆಲೆಯಲ್ಲಿ ಮುದ್ದೇಬಿಹಾಳ–ತಾಳಿಕೋಟೆ ತಾಲೂಕನ್ನು ಬರಪೀಡಿತ ತಾಲೂಕುಗಳ ಪಟ್ಟಿಗೆ ಸೇರ್ಪಡೆಗೊಳಿಸುವ ಕುರಿತು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಸಮಗ್ರ ಮಾಹಿತಿ ಹಾಗೂ ಅಂಕಿ–ಅಂಶಗಳನ್ನು ನೀಡಲಾಗಿದೆ. ಮುದ್ದೇಬಿಹಾಳ–ತಾಳಿಕೋಟೆ ತಾಲೂಕು ಬರಪೀಡಿತ ಪಟ್ಟಿಗೆ ಸೇರ್ಪಡೆಯಾಗುವ ಕುರಿತು ಮುಖ್ಯಮಂತ್ರಿಗಳು ನೂರಕ್ಕೆ ನೂರು ಭರವಸೆ ನೀಡಿದ್ದಾರೆ ಎಂದು ಶಾಸಕ ಸಿ.ಎಸ್.ನಾಡಗೌಡ ತಿಳಿಸಿದ್ದಾರೆ.

ಈ ಕುರಿತು ಬೆಂಗಳೂರಿನಿಂದ ಪತ್ರಿಕೆಯೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರನ್ನು ಭೇಟಿಯಾಗಿ ಮುದ್ದೇಬಿಹಾಳ–ತಾಳಿಕೋಟೆ ತಾಲೂಕಿನ ಮಳೆ ಕೊರತೆ, ಕೃಷಿ ಪರಿಸ್ಥಿತಿ ಹಾಗೂ ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ವಿವರವಾಗಿ ಮನವರಿಕೆ ಮಾಡಿಕೊಡಲಾಗಿದೆ. ಈಗಾಗಲೇ ಸಿದ್ಧಪಡಿಸಿರುವ ಪಟ್ಟಿಯಲ್ಲಿ ಮುದ್ದೇಬಿಹಾಳ–ತಾಳಿಕೋಟೆ ತಾಲೂಕು ಸೇರ್ಪಡೆಯಾಗುವ ಸಾಧ್ಯತೆ ಇದ್ದರೂ, ತಾಲೂಕಿನ ವಾಸ್ತವ ಪರಿಸ್ಥಿತಿಗೆ ಸಂಬಂಧಿಸಿದ ಅಂಕಿ–ಅಂಶಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ ಎಂದು ಹೇಳಿದರು.

ವಿಜಯಪುರ ಜಿಲ್ಲೆಯ ಹೆಚ್ಚಿನ ತಾಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರ್ಪಡೆಗೊಳಿಸುವಂತೆ ಸರ್ಕಾರದ ಮುಂದೆ ಒತ್ತಾಯಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ಸಂಬಂಧಪಟ್ಟ ಆಯುಕ್ತರೊಂದಿಗೆ ಮಾತನಾಡಿದ್ದು, ತಕ್ಷಣವೇ ಪರಿಸ್ಥಿತಿಯ ಕು–ರಿತು ಪರಿಶೀಲಿಸಿ ವರದಿ ತರಿಸಿ ನೀಡುವಂತೆ ಸೂಚಿಸಿದ್ದಾರೆ ಎಂದು ಶಾಸಕ ನಾಡಗೌಡ ವಿವರಿಸಿದರು. ರೈತರ ಹಿತದೃಷ್ಟಿಯಿಂದ ಸರ್ಕಾರದ ಮೇಲೆ ಅಗತ್ಯ ಒತ್ತಡ ಹೇರಲಾಗಿದ್ದು, ಮುದ್ದೇಬಿಹಾಳ–ತಾಳಿಕೋಟೆ ತಾಲೂಕು ಬರಪೀಡಿತ ಪಟ್ಟಿಗೆ ಸೇರುತ್ತದೆ ಎಂಬ ಬಗ್ಗೆ ಯಾವುದೇ ಅನುಮಾನ ಬೇಡ. ರೈತರು ಗಾಬರಿಯಾಗುವ ಅಗತ್ಯವಿಲ್ಲ. ಮುಖ್ಯಮಂತ್ರಿಗಳು ನೂರಕ್ಕೆ ನೂರು ಭರವಸೆ ನೀಡಿದ್ದಾರೆ. ಇನ್ನೂ ಸುಮಾರು 50–60 ತಾಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರ್ಪಡೆಗೊಳಿಸುವ ಸಾಧ್ಯತೆ ಇದ್ದು, ಅದರಲ್ಲಿ ಮುದ್ದೇಬಿಹಾಳ–ತಾಳಿಕೋಟೆ ತಾಲೂಕು ಖಂಡಿತವಾಗಿ ಸೇರ್ಪಡೆಯಾಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

## ರೈತರ ಹೆಸರಿನಲ್ಲಿ ರಾಜಕೀಯ ಮಾಡಬೇಡಿ

ತಾಲೂಕಿನಲ್ಲಿ ಕೆಲವರು ರೈತರ ಹೆಸರಿನಲ್ಲಿ ಹಸಿರು ಶಾಲು ಧರಿಸಿಕೊಂಡು ತಮ್ಮ ರಾಜ–ಕೀಯ ಭವಿಷ್ಯ ರೂಪಿಸಿಕೊಳ್ಳುವ ಷಡ್ಯಂತ್ರ ನಡೆಸುತ್ತಿದ್ದಾರೆ. ಇಂತಹವರ ಮಾತಿಗೆ ರೈತರು ಕಿವಿಗೊಡಬಾರದು ಎಂದು ನಾಡಗೌಡ ಹೇಳಿದರು.

ರೈತ ನಾಯಕ ಎಂಬ ಸ್ವಯಂಘೋಷಿತ ಹೆಸರಿನಲ್ಲಿ ರಾಜಕೀಯ ಮಾಡುತ್ತಿರುವ ಕೆಲವರು ತಮ್ಮ ವೈಯಕ್ತಿಕ ಸಂಕಷ್ಟಗಳಿಗೆ ರೈತರ ಹೆಸರನ್ನು ಬಳಸಿಕೊಂಡು ಪರಿಹಾರ ಪಡೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಈ ಹಿಂದೆ ಸಾಕಷ್ಟು ಉದಾಹರಣೆಗಳಿವೆ. ಹೀಗಾಗಿ ರೈತರ ಹಿತದ ಹೆಸರಿನಲ್ಲಿ ನಡೆಯುವ ರಾಜಕೀಯ ಹೋರಾಟಗಳನ್ನು ರೈತರು ಎಚ್ಚರಿಕೆಯಿಂದ ಗಮನಿಸಬೇಕು ಎಂದು ಮುದ್ದೇಬಿಹಾಳದಲ್ಲಿ ನಡೆಯುತ್ತಿರುವ ಹೋರಾಟದ ಕುರಿತು ಅಸಮಾಧಾನ ವ್ಯಕ್ತಪಡಿಸಿದರು.

**ಸಿಎಂ ಡಿ.ಕೆ.ಶಿವಕುಮಾರ್ ಜೊತೆ ಚರ್ಚೆ । ರೈತರ ಹೆಸರಿನಲ್ಲಿ ರಾಜಕೀಯ ಮಾಡುವವರ ಬಗ್ಗೆ ಕಿವಿಗೊಡಬೇಡಿ । ಶಾಸಕ ನಾಡಗೌಡ ಭರವಸೆ**

ಮುದ್ದೇಬಿಹಾಳ ಬಂದ್ ಮಾಡುವ ಅಗತ್ಯವಿಲ್ಲ ಬರ ಘೋಷಣೆಗಾಗಿ ರೈತರು ಪ್ರತಿಭಟನೆ, ಮುಷ್ಕರ ಅಥ–ವಾ ಬಂದ್‌ಗಳಂತಹ ಹೋರಾಟಗಳನ್ನು ನಡೆಸುವ ಅಗತ್ಯವಿಲ್ಲ. ಸರ್ಕಾರದ ಮಟ್ಟದಲ್ಲಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ವರದಿ ಆಧಾರದ ಮೇಲೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಮುದ್ದೇಬಿಹಾಳ ಬಂದ್ ಮಾಡುವದು ಅಗತ್ಯವಿಲ್ಲಾ ಎಂದು ಶಾಸಕ ಸಿ.ಎಸ್.ನಾಡಗೌಡ ಹೇಳಿದರು.

# ಶರಣರ ವೃತಾಚಾರಗಳು


■ ಉದಯರಶ್ಮಿ ದಿನಪತ್ರಿಕೆ

ಶರಣರು 12ನೇ ಶತಮಾನದಲ್ಲಿ ಶರಣ ಕ್ರಾಂತಿಯನ್ನು ಮಾಡಿದರು. ಅವರು ರಚಿಸಿದ ವಚನಗಳು ಕ್ರಾಂತಿಯ ವಿಚಾರಗಳನ್ನು ಹೊಂದಿವೆ. ಶರಣರಲ್ಲಿ ಎಲ್ಲಾ ಜಾತಿಯ ಜನರು ಇದ್ದರು. ಮೇಲ್ವರ್ಗದ ಜನರು ಹಾಗು ಕೆಳವರ್ಗದ ಜನರು ಎಲ್ಲರೂ ಒಟ್ಟಿಗೆ ಸೇರಿ ಸಾಮಾಜಿಕ ಸಮಾನತೆಗಾಗಿ ಹೋರಾಡಿದರು. ಅವರಲ್ಲಿ ಪ್ರಮುಖರು ಅಲ್ಲಮ ಪ್ರಭು, ಬಸವಣ್ಣ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಉರಿಲಿಂಗ ಪೆದ್ದಿ, ಸೂಳೆ ಸಂಕವ್ವ ಪ್ರಮುಖರು. ಇವರೆಲ್ಲರು ಸಹಸ್ರಾರು ಸಂಖ್ಯೆಯಲ್ಲಿ ವಚನಗಳನ್ನು ಬರೆದಿದ್ದಾರೆ.

ಎಲ್ಲರನ್ನೂ ಸಮಾನವಾಗಿ ಕಾಣುವ, ಸರ್ವರನ್ನೂ ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರಣೆ ನೀಡುವ ಧರ್ಮ ಶರಣ ಧರ್ಮವಾಗಿದೆ. 12ನೇ ಶತಮಾನದಲ್ಲಿ ಜಗಜ್ಯೋತಿ ಬಸವಣ್ಣನವರು. ಶರಣ ಧರ್ಮವು ಉದಾರ, ವೈಚಾರಿಕ ಹಾಗೂ ಸಾಮಾಜಿಕ ಕಳಕಳಿ ಹೊಂದಿದ್ದು, ರೂಢಿಗತವಾಗಿ ಲಿಂಗಾಯತ, ವೀರಶೈವ ಧರ್ಮ ಎಂದು ಕರೆಯುವ ಬದಲಿಗೆ ಶರಣ ಧರ್ಮ ಎನ್ನುವುದೇ ಸೂಕ್ತ' ಎಂದು ಕವಿ ಚನ್ನವೀರ ಕಣವಿ ಅಭಿಪ್ರಾಯಪಟ್ಟರು.

ಈ "ಶರಣ" ಪದವು ಸಕಲ ಜೀವಜಂತುಗಳನ್ನೂ ಸಮಸ್ತ ಸೃಷ್ಟ ಜಗತ್ತನ್ನೂ ನಿರ್ದೇಶಿಸುತ್ತದೆ. ಪರಶಿವನಲ್ಲಿ ಪ್ರಪ್ರಥಮದಲ್ಲಿ ಕಾಣಬಂದ 'ಅಸ್ಮಿತಾ' ಸ್ಫುರಣೆಗೆ 'ಶರಣ' ಎಂಬ ಹೆಸರಿದೆ. ಇದುವೆ ಸೃಷ್ಟಿಯ ಪ್ರಥ–'ಮತತ್ವ. ಆದ್ದರಿಂದ "ಶರಣ" ಪದವು ಸಮಸ್ತ ವಿಶ್ವದರ್ಶಕ.

ಏನೇನೂ ಇಲ್ಲದ ಪರಮಸತ್ಯದಿಂದ ಮೊಟ್ಟಮೊದಲು ಸ್ಫು–ರಿಸಿದುದು ಪರಶಿವ. ಆ ಪರಶಿವನಿಗೇ ಶರಣ ಎಂಬ ಭಿನ್ನಾಭಿಧಾನ. ಆ ಶರಣಸ್ಫುರಣೆ ಭಕ್ತನಲ್ಲಿ ಕಾಣಬರುವುದರಿಂದ ಇವನಿಗೂ ಶರಣ ಎಂಬ ಶಬ್ದ. ಒಟ್ಟಿನಲ್ಲಿ ಏನೂ ಇಲ್ಲದ ವಸ್ತುವಿನಿಂದ ಈ ಶರಣನು ಉದಿಸಿದ. ಶರಣ ಪರಿಪೂರ್ಣ ಸಮಗ್ರತೆಯ ಪ್ರತಿನಿಧಿ.



ಇಂತಹ ವೈಚಾರಿಕ ಮನೋಭೂಮಿಕೆಯುಳ್ಳ ಶರಣರು ಶುಷ್ಕ ಆಚರಣೆಗಳನ್ನು ವೃತಗಳನ್ನು ಹೇಗೆ ಒಪ್ಪಿಕೊಂಡಾರು ಎನ್ನುವುದು ಬಹುತೇಕರ ಪ್ರಶ್ನೆ? ಶರಣರ ವ್ರತಾಚಾರ ಎಂದರೆ ನೈತಿಕವಾದ, ಸತ್ಯಶುದ್ಧವಾದ ಮತ್ತು ನುಡಿದಂತೆ ನಡೆಯುವ ಜೀವನ ನಡೆಸುವುದೇ ವ್ರತವಾಗಿದೆ.

ಶರಣರು ತೋರಿದ ಪ್ರಮುಖ ಐದು ಆಚಾರಗಳುಶರಣರ ಸಂಸ್ಕೃತಿಯಲ್ಲಿ ವ್ಯಕ್ತಿತ್ವ ವಿಕಸನಕ್ಕೆ ಮತ್ತು ಸತ್ವವರ್ತನೆಗೆ ಈ ಕೆಳಗಿನ ಆಚಾರಗಳನ್ನು ಮುಖ್ಯವಾಗಿ ಪಾಲಿಸಲು ತಿಳಿಸಲಾಗಿದೆ.

ಲಿಂಗಾಚಾರ ಇಷ್ಟಲಿಂಗದೊಂದಿಗೆ ನಿತ್ಯವೂ ಅನುಸಂಧಾನ ನಡೆಸುವುದು ಮತ್ತು ಭಕ್ತಿಯಲ್ಲಿ ದೃಢವಾಗಿರುವುದು.

**ಸದಾಚಾರ**

ಸತ್ಯಶುದ್ಧ ಕಾಯಕ ಮಾಡುವುದು, ಅನ್ಯರ ಸೊತ್ತನ್ನು ಬಯಸದೇ ಇರುವುದು ಹಾಗೂ ನೈತಿಕತೆ ಉಳಿಸಿಕೊಳ್ಳುವುದು.



**ಶಿವಾಚಾರ**

ಎಲ್ಲ ಜೀವಿಗಳಲ್ಲಿಯೂ ಶಿವನನ್ನು ಕಾಣುತ್ತಾ ಸಮಾನತೆಯಿಂದ ನಡೆದುಕೊಳ್ಳುವುದು.

**ವ್ರತ ಹೋದಾಗಳೇ ಇಷ್ಟಲಿಂಗದ**
**ಕಳೆ ನಷ್ಟವವ್ವಾ**
**ಅವರು ಲಿಂಗವಿದ್ದ ಭವಿಗಳು!**
**ಅದು ಹೇಗೆಂದಡೆ; ಪ್ರಾಣವಿಲ್ಲದ ದೇಹದಂತೆ**
**ಉರಿಲಿಂಗಪೆದ್ದಿಗಳರಸ ಬಲ್ಲ**
**ನೊಲ್ಲನವ್ವ.**

ಇದು ಶರಣ ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಶರಣೆ ಕಾಳವ್ವೆಯವರು ವ್ರತದ ಬಗ್ಗೆ ಅಭಿಮಾನದಿಂದ ಬರೆದ ವಚನ. ಈ ವಚನದಲ್ಲಿ ಆಕೆ ವ್ರತಸ್ಥನು ಇಷ್ಟಲಿಂಗದ ಸಾಕ್ಷಿಯಾಗಿ ನಡೆದುಕೊಳ್ಳಬೇಕು ವ್ರತಕ್ಕೂ, ಪರಮಾತ್ಮನಿಗೂ ಇರುವುದು ನಿಕಟವಾದ ಸಂಬಂಧ. ವ್ರತ ತಪ್ಪಿ ನಡೆದರೆ ಅದು ಪ್ರಾಣವಿಲ್ಲದ ದೇಹವಿದ್ದಂತೆ ಎಂದು ಹೇಳಿದ್ದಾಳೆ. "ವ್ರತವೆಂಬುದು ನಾಯಕ ರತ್ನ. ವ್ರತವೆಂಬುದು ಸುಪ್ಪಾಣಿಯ ಮುತ್ತು. ವ್ರತವೆಂಬುದು ಸುಯಿದಾನ " ಇದೇ ರೀತಿಯಾಗಿ ಅನೇಕ ವಚನಗಳಲ್ಲಿ ವ್ರತದ ಮಹತಿಯನ್ನು ಒತ್ತಿ ಒತ್ತಿ ಹೇಳಿದ್ದಾರೆ ಕಾಳವ್ವೆ ತಾಯಿ.

ಶರಣರ ಪ್ರಕಾರ, ನೈತಿಕವಾದ, ಸತ್ಯಶುದ್ಧವಾದ ಬದುಕೇ ವ್ರತ. ನುಡಿದಂತೆ ನಡೆಯುವದೇ ವ್ರತ. ವ್ರತವೆಂದರೆ ಶೀಲ. ಯಾವುದಾದರೂ ಒಂದು ವ್ರತವನ್ನು ಆಚರಿಸುವದೆಂದರೆ ಅದರ ಮೇಲಿನ ಆಶೆಯನ್ನು ತ್ಯಜಿಸಿದರೆ ಆತ್ಮಶುದ್ದವಾಗುತ್ತ ಹೋಗುತ್ತದೆ. ಶರಣರು "ತಾವು ವ್ರತಿಗಳೆಂದು ಹೇಳದಿಹುದೇ ವ್ರತ.

ಅಕ್ಕಮ್ಮ ಕೆಳಜಾತಿಯಿಂದ ಬಂದ ದಿಟ್ಟ ಶರಣೆ. ವ್ರತದ ಬಗ್ಗೆ ಅವಳ ನಿಷ್ಠೆ ವಿಶೇಷವಾಗಿತ್ತು.

"ವ್ರತವೆಂದರೇನು ಮನೋವಿಕಾರಿಸುವದಕ್ಕೆ ಕಟ್ಟಿದ ಗೊತ್ತು; ತನ್ನ ಸ್ವಕಾರ್ಯದಿಂದ ಮಾಡುವ 'ಭಕ್ತನ ವ್ರತವೇ ವ್ರತ' ಎಂದಿದ್ದಾಳೆ. ಶರಣೆ ಕಾಲಕಣ್ಣಿಯ ಕಾಮವ್ವೆಯು "ವ್ರತಭ್ರಷ್ಟರ ನಿಟ್ಟೋರಿಸುವೆ, ತುರತುರನೆ ತೂರುವೆ" ಎಂಬ ವಚನದಲ್ಲಿ ತತ್ವ ನಿಷ್ಠೆಯಿಲ್ಲದ ವ್ರತಭ್ರಷ್ಟರನ್ನು ನಿಷ್ಠುರವಾಗಿ ಖಂಡಿಸಿರುತ್ತಾಳೆ.

ಮಹಾಮಾನವತಾವಾದಿ ಬಸವಣ್ಣನವರ ಸಪ್ತಸೂತ್ರಗಳನ್ನೊಳಗೊಂಡ ಈ ವಚನದಲ್ಲಿ ಒಂದೊಂದು ಸೂತ್ರವು ಒಂದೊಂದು ವ್ರತದಂತೆ ಗೋಚರವಾಗುತ್ತವೆ.

**"ಕಳಬೇಡ! ಕೊಲಬೇಡ!**
**ಹುಸಿಯ ನುಡಿಯಲು ಬೇಡ!**

**ಆಕರ**
**ಸಂಕೀರ್ಣ ವಚನ ಸಂಪುಟಗಳು**
**ಬಸವಣ್ಣನವರ ವಚನ ಸಂಪುಟ**
**ಬಯಲು ಬ್ಲಾಗ್ 2018**

**ಮುನಿಯಬೇಡ! ಅನ್ಯರಿಗೆ ಅಸಹ್ಯ ಪಡಬೇಡ!**
**ಇದಿರು ಹಳಿಯಲು ಬೇಡ! ತನ್ನ ಬಣ್ಣಿಸಬೇಡ!**
**ಇದೇ ಅಂತರಂಗ ಶುದ್ಧಿ,**
**ಇದೇ ಬಹಿರಂಗ ಶುದ್ಧಿ,**
**ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ"**

ಶುದ್ಧ ಜೀವನದ ಇಂಥ ಸಪ್ತಸೂತ್ರಗಳೇ ನಾವು ಹಿಡಿದುಕೊಳ್ಳಬೇಕಾದ ವ್ರತಗಳು ಎಂದು ಮನದಟ್ಟುವಂತೆ ಹೇಳಿರುತ್ತಾರೆ.

ಕಸಗೂಡಿಸುವ ಕಾಯಕದ ಶರಣೆ ಸತ್ಯಕ್ಕ ಆತ್ಮಗೌರವದ



ಪ್ರತೀಕವಾಗಿದ್ದವರು. "ಅಳಿಮನದಿ, ಪರ ದ್ರವ್ಯಕ್ಕೆ ಆಶೆ ಪಡದೇ, ಲಂಚದ ಆಮಿಷಕ್ಕೆ ಬಲಿ ಬೀಳಲಾರೆ" ಎಂದು ಹೇಳುವ ಮೂಲಕ ಅದನ್ನೇ ತನ್ನ ವ್ರತವಾಗಿ ಸ್ವೀಕರಿಸಿದ್ದಳು. ಶರಣೆ ರೇಚವ್ವೆ–"ಬಂಜೆ ಆವಿಂಗೆ ಕ್ಷೀರವುಂಟೇ? ವ್ರತಹೀನರ ಬೆರೆಯಲುಂಟೇ?" ಎನ್ನುವ ಮೂಲಕ ವ್ರತಾಚಾರದ ಬಗ್ಗೆ ತನ್ನ ನಿಷ್ಠೆಯನ್ನು ವ್ಯಕ್ತಪಡಿಸುತ್ತಾರೆ.

ಶರಣೆ ಸೂಳೆ ಸಂಕವ್ವೆಯು

"ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ" ಎಂದು ಹೇಳುವಲ್ಲಿ ಈಗ ತಾನು ಪರಮಾತ್ಮನನ್ನು ಒತ್ತೆ ಹಿಡಿದಿದ್ದು, ಮತ್ತೊಬ್ಬರನ್ನು ಒತ್ತೆ ಹಿಡಿಯಲಾರೆ ಎಂದು ಹೀಗೆ ಒಬ್ಬನಿಗೆ ಆಳಾಗಿ ಇನ್ನೊಬ್ಬರ ನೆನೆಯುವ ಭಕ್ತೆ ತಾನಾದರೆ ತನ್ನ ಹಿಂದ ವೃತ್ತಿಯಲ್ಲಿ ವೇಶ್ಯೆಯರಿಗೆ ಸೂಳೆಯ–ರಿಗೆ ಕೊಡುವ ಶಿಕ್ಷೆ ತನಗೂ ಮತ್ತೆ ಕೊಡಬಹುದು ಎಂದೆನ್ನುತ್ತ ತನ್ನ ಇಷ್ಟ ಲಿಂಗ ನಿಷ್ಠೆಯನ್ನು ತೋರುತ್ತಾಳೆ. ತಾನು ಹಿಡಿದ ವ್ರತದ ಬಗ್ಗೆ ಖಡಾಖಂಡಿತವಾಗಿ ಹೇಳಿರುತ್ತಾರೆ.

ಶರಣೆ ಅಕ್ಕಮ್ಮ ತನ್ನ ಅನೇಕ ವಚನಗಳಲ್ಲಿ ವ್ರತದ ಮಹತ್ವ ಸಾರಿದ್ದಾರೆ: "ವ್ರತ ಶುದ್ಧವಾಗಿ ನಡೆವಾತನೇ ಎನಗೆ ಅಧೀನದರಸು"



ಎಂದು ಶರಣ ಏಲೇಶ್ವರ ಕೇತಯ್ಯನವರು ಹೇಳಿದ್ದಾರೆ. ಮಾನವನು ವ್ರತ ಶುದ್ಧನಾಗಿರಬೇಕು. ವ್ರತವನ್ನು ಇಂದ್ರಿಯನಿಗ್ರಹ ಹಾಗೂ ಆಧ–'ನ್ಯಾತ್ಮಿಕ ಪ್ರಗತಿಗಾಗಿ ಆಚರಿಸಬೇಕು. ನಿಜವಾದ ವ್ರತಸ್ಥನೆಂದರೆ ಅನುಗ್ರಹ ಹಾಗೂ ಅನುಭಾವದಿಂದ ಕೂಡಿದವನಾಗಿರಬೇಕು. ಶರಣರು, "ಪರಧನವನೊಲ್ಲದಿಪ್ಪುದೇ ವ್ರತ, ಪರ ಸ್ತ್ರೀಯರ ಕೂಡದಿಪ್ಪುದೇ ಶೀಲ" ಎಂದು ಹೇಳಿರುತ್ತಾರೆ. ಶರಣ ಎಳೆಗಾರ ಕಾಮಣ್ಣನವರು ತಮ್ಮ ವಚನದಲ್ಲಿ ಎಲೆಗೂ ವ್ರತಕ್ಕೂ ಹೋಲಿಕೆ ಮಾಡಿ ವ್ರತಭ್ರಷ್ಟರೆಂದರೆ ಎಲ್ಲೂ ಸಲ್ಲದವರು ಎಂದು ಹೇಳಿದ್ದಾರೆ.

ಶರಣೆ ಮುಕ್ತಾಯಕ್ಕನು ತನ್ನ ವಚನದಲ್ಲಿ "ಹಿಡಿದ ವ್ರತ ಬಿಡದಿರಲು ಅದೇ ಮಹಾಜ್ಞಾನದಾಚರಣೆ"ಯೆಂದು ವ್ರತದ ಮಹತ್ವವನ್ನು ಹೇಳಿರುತ್ತಾರೆ. ಶರಣೆ ಮಸಣಮ್ಮ 'ಕಾಗೆ ನಾಯ ತಿಂದವರಿಲ್ಲ; ವ್ರತಭ್ರಷ್ಟನ ಕೂಡಿದವರಿಲ್ಲ " ಎಂಬ ವಚನದಲ್ಲಿ ಕೊಟ್ಟ ಕಾಗೆ, ನಾಯಿಗಳ ಈ ದೃಷ್ಟಾಂತ ವ್ರತಹೀನ, ವ್ರತಭ್ರಷ್ಟರನ್ನು ಉದ್ದೇಶಿಸಿ ಮಾತನಾಡುತ್ತದೆ. ಶರಣೆ ಗಂಗಮ್ಮ, ಧರ್ಮದ ತಳಹದಿಯ ಮೇಲೆ ಸತ್ಯ, ಶುದ್ಧ, ನಡೆ ನುಡಿಯುವ ವ್ರತವು ಪ್ರಾಣಕ್ಕಿಂತ ಮಿಗಿಲಾದದ್ದು ಎಂದು ವ್ರತದ ಮಹಿಮೆಯನ್ನು ಹೇಳುತ್ತಾರೆ.

ಶರಣ ಮಾದಾರ ಚೆನ್ನಯ್ಯನವರು ಕೂಡ ಇದನ್ನೇ "ನುಡಿದಂತೆ ನಡೆ, ನಡೆದಂತೆ ನುಡಿ" ಎಂದು ಮಾರ್ಮಿಕವಾಗಿ ತಿಳಿಸುತ್ತಾರೆ.

ಶರಣರು ತೋರಿದ ಪ್ರಮುಖ ಐದು ಆಚಾರಗಳು ಶರಣರ ಸಂಸ್ಕೃತಿಯಲ್ಲಿ ವ್ಯಕ್ತಿತ್ವ ವಿಕಸನಕ್ಕೆ ಮತ್ತು ಸತ್ವವರ್ತನೆಗೆ ಈ ಕೆಳಗಿನ ಐದು ಆಚಾರಗಳನ್ನು ಮುಖ್ಯವಾಗಿ ಪಾಲಿಸಲು ತಿಳಿಸಲಾಗಿದೆ.

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ. ಇವತ್ತು ವೃತ ನೇಮ ಶೀಲ ಎನ್ನುವ ಶರಣರ ವಚನಗಳಲ್ಲಿನ ಪದಗಳನ್ನು ಇಂದಿನ ವೃತ ನೇಮ ಪೂಜೆ ಇತ್ಯಾದಿ ಕರ್ಮಠ ಆಚರಣೆಗೆ ಹೋಲಿಸುತ್ತಾರೆ. ಬಹುತೇಕ ವಚನಕಾರರು ವೃತ ನೇಮ ಅಂತರಂಗದ ಶುದ್ಧಿಗೆ ಲಿಂಗ ಯೋಗ ಜಂಗಮ ಸೇವೆ ಅರಿವಿನ ಬೆರಗಿನ ಶೋಧಕ್ಕೆ ಹಾತೊರೆಯುತ್ತಿದ್ದರು. ತಾನು ಶುದ್ಧ ಮನ ಶುದ್ಧ ಭಾವ ಶುದ್ಧ ಚಿತ್ ಶುದ್ಧವಾಗಿಸಿ ಪರಿಶುದ್ಧ ಕಾಯಕದಿಂದ ಬಂದ ಕಾರೆಯ ತಪ್ಪಲವನ್ನು ಪ್ರಸಾದ ಮಾಡಿ ಸ್ವೀಕರಿಸಿದರು ಶರಣರು.

ಅನೇಕ ಸಂಶೋಧಕರು ವೃತ ನೇಮ ಎಂದ ಕೂಡಲೇ ವೈದಿಕ ವ್ಯವಸ್ಥೆಯ ಆಚರಣೆಗಳೆಂದು ಗ್ರಹಿಸುತ್ತಾರೆ, ಕೆಲವರಂತೂ ವೃತ ನೇಮದವರೆಂದರೆ ತಳ ಸಮುದಾಯದ ಪನ್ಯಾಂಗಣೆಯರು ಎಂತಲೂ ಭಾವಿಸುತ್ತಾರೆ. ಕಾಯವೇ ಕೈಲಾಸ ಶ್ರಮವೇ ತಪ ಜಪ ಎಂದರಿತ ಶರಣರ ವೃತ ಮಹಾಮಾನವನ ಪಥ.

ಲೇಖನ
– ಡಾ ಶಶಿಕಾಂತ ಪಟ್ಟಣ
ರಾಮದುರ್ಗ



# ಮಧುಮಾಸ ಚಂದ್ರಮ ಕಣ್ಣಿಗದು ಭೂಷಣ

■ ಉದಯರಶ್ಮಿ ದಿನಪತ್ರಿಕೆ








ಪ್ರಾಣಸಖಿ ಪ್ರೀತಿ,

ಅರ್ಧ ತೆರೆದ ಕಿಟಕಿಯ ಹೊರಗೆ ಸದ್ದಿಲ್ಲದೆ ಸುರಿಯುತ್ತಿರುವ ಜಿಟಿ ಜಿಟಿ ಮಳೆಗೆ ತಣ್ಣನೆಯ ಗಾಳಿ ಜೊತೆಯಾಗಿತ್ತು. ನನ್ನ ಮನಸ್ಸು ಮಾತ್ರ ಹಿಂದಕ್ಕೆ ಪಯಣಿಸುತ್ತಿತ್ತು.

ಕೈಯಲ್ಲಿ ಹಿಡಿದಿರುವ ಕಾಫಿ ಕಪ್ಪಿನಿಂದ ಹಬೆಯಾಡುತ್ತಿತ್ತು. ನನ್ನ ಬಾಳಿನ ಪ್ರೀತಿಯೇ, ನಿನ್ನೊಂದಿಗೆ ಕಳೆದ ಆ ಪುಟ್ಟ ಪುಟ್ಟ ಮಧುರವಾದ ಕ್ಷಣಗಳು ನನ್ನ ಬದುಕಿನ ಲೇಖನಿಯಿಂದ ಬರೆದ ಸುಂದರ ಕಾವ್ಯದಂತಿತ್ತು.

ಹಿಂದಿನ ರಾತ್ರಿ ಹಳೆಯ ಡೈರಿ ತೆರೆದಾಗ ನಾನು ನೀನು ಮೊದಲು ಭೇಟಿಯಾದ ಆ ಸಂಜೆ ಕಣ್ಣಮುಂದೆ ಬಂತು. ಅಂದು ನೀನು ಧರಿಸಿದ್ದ ಆ ಆಕಾಶ ನೀಲಿ ಬಣ್ಣದ ಲಂಗ ದಾವಣಿ, ನಿನ್ನ ಹಣೆಯ ಮೇಲೆ ಅಲೆಯಂತೆ ಆಡುತ್ತಿದ್ದ ಆ ಮುಂಗುರುಳು ನನ್ನ ಮನದಲ್ಲಿ ಇಂದಿಗೂ ಹಾಗೇ ಹಸಿರಾಗಿದೆ. ನಿನ್ನ ಕಂಗಳು ಕವಿಯ ಕಲ್ಪನೆಗೂ ಸಿಗದ ನೀಲ ಸರೋವರಗಳು. ಆ ಕಾಡಿಗೆ ಕಣ್ಣುಗಳ ಒಂದು ಸಣ್ಣ ನೋಟದಲ್ಲಿ ಎಂಥ ಸನ್ಯಾಸಿಯು ಮರಳಾಗುವಷ್ಟು ಮಾದಕತೆ. ನೀನು ಮೆಲ್ಲನೆ ರೆಪ್ಪೆ ಬಡಿಯುವಾಗ, ಇಡೀ ಸೃಷ್ಟಿಯೇ ಒಂದು ಕ್ಷಣ ನಿಂತು ಮೌನವಾಗಿ ಆ ಅಂ–



ದವನ್ನು ಆಸ್ವಾದಿಸುವಂತೆ ಭಾಸವಾಗುತ್ತಿತ್ತು.

ಇದು ಸಾಲದೆಂಬಂತೆ

ಕಡಲಿನಷ್ಟು ಆಳವಾದ ಪ್ರೀತಿಯ ನಿಷ್ಕಲ್ಮಶ ಮಂದಹಾಸವಿತ್ತು.

ನೀನೊಂದು ಮುಗುಳ್ನಗೆಯ ಚಂದ್ರಿಕೆ.

ನಿನ್ನ ತುಟಿಗಳ ಅಂಚಿನಲ್ಲಿ ಅಂದದ ಮಂದಹಾಸ ಅರಳಿತ್ತು.

ಆ ಸಣ್ಣ ಮುಗುಳ್ನಗೆ, ಶರತ್ಕಾಲದ ಹುಣ್ಣಿಮೆಯ ಚಂದ್ರನ ಬೆಳಕಿನಂತೆ ಅತ್ಯಂತ ಶೀತಲ ಮತ್ತು ಸುಂದರವಾಗಿತ್ತು. ನೀನು ನಕ್ಕಾಗ, ಒಣಗಿದ ಮರದಲ್ಲೂ ಹೂವು ಅರಳುವಂತೆ, ಕಲ್ಲಿನ ಹೃದಯದಲ್ಲೂ ಪ್ರೀತಿಯ ಕಾರಂಜಿ ಚಿಮ್ಮುವಂತೆ ಭಾಸವಾಗುತ್ತದೆ. ಆ ನಗುವಿನಲ್ಲಿ ಯಾವುದೇ ಕೃತಕತೆ ಇಲ್ಲ; ಅದು ನಿನ್ನೊಳಗಿನ ಮುಗ್ಧತೆಯ ಸುಂದರ ಪ್ರತಿಬಿಂಬ.

ಮುಂಗುರುಳ ಲಾಸ್ಯ ಕಾರ್ಗತ್ತಲ ರಾತ್ರಿಯಂತೆ. ಸುಂದರವಾದ ನಿನ್ನ ಮುಂಗುರುಳುಗಳು ಹಣೆಯ ಮೇಲೆ ತೇಲಿ ಬರುವಾಗ, ತಂಗಾಳಿಯೂ ಸಹ ನಿನ್ನ ಕೆನ್ನೆಯನ್ನು ಸವರಿ ಧನ್ಯತೆಯನ್ನು ಅನುಭವಿಸುತ್ತಿತ್ತು. ನೀನು ನಾಚಿ ತಲೆ ತಗ್ಗಿಸಿದಾಗ, ಆ ಮುಂಗುರುಳುಗಳು ನಿನ್ನ ಮುಖದ ಅಂದವನ್ನು ಮರೆಮಾಚುವ ರೇಷ್ಮೆಯ ಪರದೆಯಂತೆ ಕಾಣುತ್ತವೆ. ಆ ಕೂದಲ ಸುವಾಸನೆಯು ಮಲ್ಲಿಗೆಯ ಗಂಧವನ್ನೂ ಮರೆಸುವಷ್ಟು ಮಾದಕ ಮತ್ತು ಪವಿತ್ರ.

ನೀನು ನಡೆಯುವ ದಾರಿ ಸುಂದರವಾದ ಕಾವ್ಯದ ಸಾಲುಗಳಂತೆ ಲಯಬದ್ಧವಾಗಿರುತ್ತದೆ. ನಿನ್ನ ಪ್ರತಿ ಹೆಜ್ಜೆಯಲ್ಲೂ ಒಂದು ಅಪರೂಪದ ಗಾಂಭೀರ್ಯ ಮತ್ತು ಹೆಣ್ಣಿನ ಸಹಜ ನಯನ ಮನೋಹರ ಗುಣ ಎದ್ದು ಕಾಣುತ್ತದೆ. ಜಗತ್ತಿನ ಎಲ್ಲಾ ಆಭರಣಗಳಿಗಿಂತ ನಿನ್ನ ನಾಚಿಕೆಯೇ ನಿನಗೆ ಅತ್ಯಂತ ಶ್ರೇಷ್ಠವಾದ ಅಲಂಕಾರವಾಗಿದೆ.

ನಿನ್ನ ಸೌಂದರ್ಯವು ಕೇವಲ ಕಣ್ಣಿಗೆ ಕಾಣುವ ರೂಪವಲ್ಲ; ಅದು ನನ್ನ ಮನವನ್ನು ಮುಟ್ಟುವ

ಹೃದಯವನ್ನು ತಟ್ಟುವ ದಿವ್ಯ ಚೇತನದಂತಿದೆ.

ಯಾವ ಜನ್ಮದ ಪುಣ್ಯವೋ ಏನೋ ನೀನು ನನ್ನ ಆಪ್ತಸಖಿ ಆದೆ. ಆ ಗೆಳೆತನ ಪ್ರೀತಿಗೆ ತಿರುಗಿತ್ತು. ನೀನು ಮಾತನಾಡುತ್ತಾ ಕೈಸನ್ನೆ ಮಾಡುವಾಗ, ನಿನ್ನ ಕೈಬೆರಳಿನ ಉಂಗುರ ಮಿನುಗುತ್ತಿದ್ದ ಆ ಕ್ಷಣಕ್ಕೆ ನನ್ನ ಹೃದಯ ಸೋತು ಹೋಗಿತ್ತು. ನಾವಿಬ್ಬರೂ ಜೊತೆಯಾಗಿ ರಸ್ತೆ ದಾಟುವಾಗ, ಹಠಾತ್ತನೆ ಬಂದ ವಾಹನಕ್ಕೆ ಹೆದರಿ ನೀನು ನನ್ನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದ ಆ ಕ್ಷಣ ನೆನಪಿದೆಯೇ? ನಿನ್ನ ಕೈಬೆರಳುಗಳ ಬೆಚ್ಚಗಿನ ಸ್ಪರ್ಶ ನನ್ನ ನರನಾಡಿಗಳಲ್ಲಿ ಹೊಸ ಸಂಚಲನ ಮೂಡಿಸಿತ್ತು. ಅದು ಕೇವಲ ಒಂದು ಕ್ಷಣದ ಸ್ಪರ್ಶವಾಗಿರಲಿಲ್ಲ, ಇಡೀ ಜನ್ಮಕ್ಕೆ ಸಾಕಾಗುವಷ್ಟು ಪ್ರೀತಿಯ ಭರವಸೆಯಾಗಿತ್ತು.

ಮತ್ತೊಂದು ಮಧುರ ನೆನಪೆಂದರೆ ಕಾಲೇಜಿನಿಂದ ಮರಳಿ ಬರುವಾಗ ಆ ಸಂಜೆಯ ಬಸ್ ಪ್ರಯಾಣ. ಕಿಟಕಿಯ ಪಕ್ಕದ ಸೀಟಿನಲ್ಲಿ ಕುಳಿತು, ಒಂದೇ ಇಯರ್‌ಫೋನ್ ಹಂಚಿಕೊಂಡು ನಮ್ಮಿಬ್ಬ–ರಿಗೂ ಇಷ್ಟವಾದ ಮಧುಮಾಸ ಚಂದ್ರಮ ಕಣ್ಣಿಗದು ಭೂಷಣ ಎನ್ನುವ ಹಳೆಯ ಕನ್ನಡ ಹಾಡನ್ನು ಕೇಳುತ್ತಿದ್ದೆವು. ಗಾಳಿಗೆ ನಿನ್ನ ಕೂದಲ ಸುವಾಸನೆ ನನ್ನ ಮುಖಕ್ಕೆ ಸೋಕಿದಾಗ, ಈ ಜಗತ್ತಿನ ಎಲ್ಲಾ ಗದ್ದಲಗಳೂ ನಿಂತುಹೋದಂತೆ ಭಾಸವಾಗಿತ್ತು. ನೀನು ನನ್ನ ಹೆಗಲ ಮೇಲೆ ಮೆಲ್ಲನೆ ತಲೆಯಿಟ್ಟು ಕಣ್ಣು ಮುಚ್ಚಿದಾಗ, ನನ್ನ ಉಸಿರಾಟದ ವೇಗ ಹೆಚ್ಚಾಗಿತ್ತು. ಆ ಕ್ಷಣದಲ್ಲಿ ಕಾಲ ಹಾಗೇ ನಿಂತುಬಿಡಲಿ ಎಂದು ಮನಸ್ಸು ತೀವ್ರವಾಗಿ ಬಯಸಿತ್ತು. ಅದು ಅತಿಯಾದ ಪ್ರೀತಿಯಲ್ಲ, ಎರಡು ಮನಸ್ಸುಗಳ ನಡುವಿನ ಮೌನ, ಮಧುರ ಸಂವಾದವಾಗಿತ್ತು.



ನಿನ್ನ ಕಣ್ಣುಗಳಲ್ಲಿ ನನಗಾಗಿ ಮಿನುಗುವ ಆ ಪ್ರೀತಿ, ನಿನ್ನ ಆ ಮುಗ್ಧ ನಗು ನನ್ನ ಬದುಕಿನ ಎಲ್ಲಾ ನೋವುಗಳನ್ನು ಮರೆಸುವ ಸಂಜೀವಿನಿ. ಹತ್ತಿರ ಕುಳಿತಾಗ ನೀನು ನಾಚಿ ಕೆಂಪಾಗುವ ಆ ಕೆನ್ನೆಗಳು, ಏನನ್ನೋ ಹೇಳಲು ಹೊರಟು ತಡಕಾಡುವ ನಿನ್ನ ಮಾತುಗಳುಇವೆಲ್ಲವೂ ನನ್ನ ಹೃದಯದಲ್ಲಿ ಎಂದಿಗೂ ಅಳಿಯದ ಸುಂದರ ಲಹರಿಗಳು. ನೀನು ದೂರವಿದ್ದರೂ, ನಿನ್ನ ನೆನಪುಗಳೇ ನನ್ನನ್ನು ಮುನ್ನಡೆಸುವ ಬೆಳಕು. ಈ ಸುಂದರ ನೆನಪುಗಳ ಸುರುಳಿಯಲ್ಲಿ ನಾನು ಎಂದಿಗೂ ನಿನ್ನ ಪ್ರೀತಿಯ ಕೈದಿಯಾಗಿಯೇ ಇರಲು ಬಯಸುತ್ತೇನೆ.

ನಮ್ಮ ನಡುವಿನ ಪ್ರೀತಿ ಎಂದಿಗೂ ಆರ್ಭಟದ ಕಡಲಾಗಿರಲಿಲ್ಲ; ಅದು ಕಲ್ಲಿನ ಸಂದಿನಿಂದ ಸದ್ದಿಲ್ಲದೆ ಹರಿಯುವ ತಿಳಿ ತೊರೆಯಂತೆ ನವಿರಾದದ್ದು. ದೊಡ್ಡ ಮಾತುಗಳಿಲ್ಲದೆ, ಕೇವಲ ಕಣ್ಣುಗಳಲ್ಲೇ ಕವಿತೆ ಓದುವ ಕಲೆ ನಮಗೆ ಒಲಿದಿತ್ತು. ಆ ಸಂಜೆ ನಾವಿಬ್ಬರೂ ಹಳೆಯ ಬೇವಿನ ಮರದ ಕೆಳಗಿನ ಬೆಂಚಿನ ಮೇಲೆ ಕುಳಿತಾಗ, ನಮ್ಮ ನಡುವೆ ಯಾವ ಮಾತುಗಳೂ ಇರಲಿಲ್ಲ. ಆದರೆ, ಆ ಮೌನದಲ್ಲೂ ಒಂದು ಅದ್ಭುತವಾದ ನಾದವಿತ್ತು.ನನ್ನ ಬಲಗೈ ನಿನ್ನ ಎಡಗೈ ಬೆರಳುಗಳನ್ನು ಮೆಲ್ಲನೆ ಸ್ಪರ್ಶಿಸಿದ ಆ ಕ್ಷಣ ಇಂದಿಗೂ ನನ್ನ ಎದೆಯೊಳಗೆ ಕಂಪನ ಸೃಷ್ಟಿಸುತ್ತದೆ. ನಿನ್ನ ರೇಷ್ಮೆಯಂತಹ ಮೃದುವಾದ ಹಸ್ತವನ್ನು ನನ್ನ ಕೈಯೊಳಗೆ ತೆಗೆದುಕೊಂಡಾಗ, ನಿನ್ನ ಮುಖದಲ್ಲಿ ಮೂಡಿದ ಆ ಸಣ್ಣ ನಾಚಿಕೆ ಜಗತ್ತಿನ ಅತ್ಯಂತ ಸುಂದರ ದೃಶ್ಯವಾಗಿತ್ತು. ನೀನು ನಿನ್ನ ತಲೆಯನ್ನು ನನ್ನ ಹೆಗಲ ಮೇಲೆ ಇಟ್ಟಾಗ, ನಿನ್ನ ಕೂದಲಿನಿಂದ ಸೂಸಿದ ಆ ಮಲ್ಲಿಗೆಯ ಗಂಧ ನನ್ನ ಉಸಿರನ್ನು ಆವರಿಸಿಕೊಂಡಿತು. ಆ ಕ್ಷಣ ನಮ್ಮ ಉಸಿರಾಟದ ಲಯ ಒಂದೇ ಆಗಿತ್ತು. ನನ್ನ ಶರ್ಟಿನ ಗುಂಡಿಯನ್ನು ಸುಮ್ಮನೆ ತಿರುಗಿಸುತ್ತಾ ನೀನು ಪಿಸುಮಾತಿನಲ್ಲಿ ಏನೋ ಹೇಳಲು ಹೋದಾಗ, ನಿನ್ನ ತುಟಿಗಳ ಮೇಲಿದ್ದ ಆ ಸಣ್ಣ ಮುಗುಳ್ನಗೆ ನನ್ನನ್ನು ಸಂಪೂರ್ಣವಾಗಿ ಮಂತ್ರಮುಗ್ಧನನ್ನಾಗಿಸಿತ್ತು.

ತಂಗಾಳಿಯು ನಿನ್ನ ಮುಂಗುರುಳನ್ನು ನಿನ್ನ ಮುಖದ ಮೇಲೆ ತಂದಾಗ, ನಾನು ನನ್ನ ಬೆರಳುಗಳಿಂದ ಅದನ್ನು ನಿನ್ನ ಕಿವಿಯ ಹಿಂದೆ ಸರಿಸಿದ ಆ ಒಂದು ಸೆಕೆಂಡಿನ ಸ್ಪರ್ಶಅದು ಕೇವಲ ದೈಹಿಕ ಸ್ಪರ್ಶವಾಗಿರಲಿಲ್ಲ; ಎರಡು ಮನಸ್ಸುಗಳು ಪರಸ್ಪರ ಅಪ್ಪಿಕೊಂಡ ದಿವ್ಯ ಕ್ಷಣವಾಗಿತ್ತು.ನಮ್ಮ ನಡುವಿನ ಪ್ರಣಯವು ನಿಗೂಢವಾದ ಕಾವ್ಯದಂತೆ ಸುಂದರ.

ನೀನು ನನ್ನ ಕಣ್ಣುಗಳನ್ನು ನೇರವಾಗಿ ನೋಡಿ, ಏನನ್ನೂ ಹೇಳದೆ ಕೇವಲ ಒಂದು ನಿಟ್ಟುಸಿರು ಬಿಟ್ಟಾಗ, ಆ ನಿಟ್ಟುಸಿರಿನಲ್ಲೂ ನನಗಾಗಿ ಕಾದಿರಿಸಿದ ಪ್ರೀತಿಯ ಸಾಮ್ರಾಜ್ಯವೇ ಕಾಣಿಸುತ್ತಿತ್ತು. ಇಂತಹ ಸಣ್ಣ, ನವಿರಾದ ಮತ್ತು ಪವಿತ್ರವಾದ ಕ್ಷಣಗಳೇ ನಮ್ಮ ಪ್ರೀತಿಯನ್ನು ಕಾಲಾತೀತವಾಗಿ ಇರಿಸಿವೆ. ಈಗ ನಮ್ಮಿಬ್ಬರಿಗೂ ವಿವಾಹ ಬಂಧನದಲ್ಲಿ ಒಂದಾಗಿ ಹೊಸ ಜೀವನಕ್ಕೆ

ಮುನ್ನುಡಿ ಬರೆಯುವಷ್ಟು ಪ್ರಾಯವಾಗಿದೆ. ಮನೆಯಲ್ಲಿ ಜೋಡಿ ಹುಡುಕಲು ಮುಂದಾಗಿದ್ದಾರೆ. ನೀನೇ ಪ್ರಾಣಸಖಿ ಬಾಳಸಖಿ ಹಾಗಂತ ನೀನೂ ಒಪ್ಪಿಯಾಗಿದೆ. ಅಪ್ರಾಪ್ತ ವಯಸ್ಸಿನಲ್ಲಿ ಊರು ಬಿಟ್ಟು ದೂರ ಹೋಗಿ ತಂದೆ ತಾಯಿ ಮನಸ್ಸು ನೋಯಿಸಿ ಒಂದಾದರೆ ಸುಖವಿಲ್ಲ ಎಂದು ಬುದ್ಧಿ ಹೇಳಿದ ಸುಮತಿ ನೀನು. ಈಗ ಮದುವೆಯ ಮಮತೆಯ ಕರೆಯೋಲೆ ಹಂಚಿಯಾಗಿದೆ. ಇನ್ನೇನು ಎರಡು ದಿನದಲ್ಲಿ ನಾವಿಬ್ಬರು ಜೋಡಿ ಹಕ್ಕಿಗಳು. ಪ್ರತಿ ರಾತ್ರಿ ಪ್ರಥಮ ರಾತ್ರಿಯಾಗಿಸಲು ಮಧುಮಾಸ ಚಂದ್ರಮ ಹಾಡು ಹಾಡುತ್ತ ನಿನ್ನ ತುಟಿಯಂಚಿನ ಮಧು ಹೀರಲು ತುದಿಗಾಲಲ್ಲಿ ಕಾದಿರುವೆ. ಬಂದು ಬಿಡು ಸುಮತಿ ಇತಿ ನಿನ್ನ ಪ್ರಾಣಸಖ ಪ್ರೇಮ

ಲೇಖನ
– ಜಯಶ್ರೀ ಜೆ ಅಬ್ಬಿಗೇರಿ
ಇಂಗ್ಲಿಷ್ ಉಪನ್ಯಾಸಕರು
ಬೆಳಗಾವಿ
ಮೊ: 9449234142



## ಬ್ಯಾಂಕ್ ಗ್ರಾಹಕರೊಂದಿಗೆ ಸಹಾನುಭೂತಿಯಿಂದ ವರ್ತಿಸಿ

### ವಿಜಯಪುರದಲ್ಲಿ ಸಾಲ ಅರ್ಜಿಗಳ ವಿಲೇವಾರಿಗೆ ಒಂದು ವಾರದ ಗಡುವು ನೀಡಿದ ಜಿಪಂ ಉಪಕಾರ್ಯದರ್ಶಿ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಬ್ಯಾಂಕಿಗೆ ಆಗಮಿಸುವ ಗ್ರಾಹಕರೊಂದಿಗೆ ಸಹಾನುಭೂತಿ ಹಾಗೂ ಸಕಾರಾತ್ಮಕ ಮನೋಭಾವದಿಂದ ವರ್ತಿಸಿ, ಅರ್ಹ ಫಲಾನುಭವಿಗಳಿಗೆ ಸರ್ಕಾರದ ವಿವಿಧ ಯೋಜನೆಗಳಡಿ ಲಭ್ಯವಿರುವ ಸೌಲಭ್ಯಗಳ ಕು– ಎಂದರು.

ನಿಗದಿತ ಅವಧಿಯಲ್ಲಿ ಸಾಲ ಸೌಲಭ್ಯ ಒದಗಿಸಬೇಕು. ಸಾಲ ಸೌಲಭ್ಯಕ್ಕಾಗಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಅನಗತ್ಯವಾಗಿ ಬಾಕಿ ಉಳಿಸಬಾರದು ಎಂದು ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿ ಅವರು ಬ್ಯಾಂಕ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾ ಅಗ್ರಣೀಯ ಬ್ಯಾಂಕ್ ವತಿಯಿಂದ ಶುಕ್ರವಾರ ದ ಜಿಲ್ಲಾ ಪಂಚಾಯತಿಯಲ್ಲಿ ಆಯೋಜಿಸಲಾಗಿದ್ದ ತ್ರೈಮಾಸಿಕ ಡಿಸ್ಟ್ರಿಕ್ಟ್ ಕನ್ಸಲ್ಟೇಟಿವ್ ಕಮಿಟಿ ಹಾಗೂ ಡಿಸ್ಟ್ರಿಕ್ಟ್ ಲೆವೆಲ್ ರಿವಿವ್ ಕಮಿಟಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬ್ಯಾಂಕಿಗೆ ವಿವಿಧ ಯೋಜನೆಗಳಡಿ ಸಾಲ ಸೌಲಭ್ಯ ಪಡೆಯಲು ಬರುವ ಗ್ರಾಹಕ–ರಿಗೆ ಬ್ಯಾಂಕಿನ ಅಧಿಕಾರಿಗಳು ಸೂಕ್ತ ಸ್ಪಂದನೆ ನೀಡಬೇಕು. ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳಂತೆ ಬ್ಯಾಂಕಿಂ–ಗ್ ಯೋಜನೆಗಳು ಹಾಗೂ ರಿತು ಗ್ರಾಹಕರಿಗೆ ಅಗತ್ಯ ಮಾಹಿತಿ ಮತ್ತು ಮಾರ್ಗದರ್ಶನ ನೀಡಬೇಕು. ಸಾಲಕ್ಕಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ದಾಖಲಾತಿಗಳು ಅಪೂರ್ಣ ವಾಗಿದ್ದರೆ, ಅರ್ಜಿದಾರರನ್ನು ಅಲೆದಾಡಿಸದೇ ಅಗತ್ಯ ಇರುವ ದಾಖಲೆ ತಿಳಿಸಿ ಅರ್ಜಿ ಪೂರ್ಣಗೊಳಿಸಲು ಸಹಕ–ರಿಸಬೇಕು ಎಂದು ಸೂಚಿಸಿದರು. ಅರ್ಹ ಫಲಾನುಭವಿಗಳ ಅರ್ಜಿಗಳನ್ನು ಅನಗತ್ಯವಾಗಿ ಬಾಕಿ ಉಳಿಸಿಕೊಂಡು ವಿಳಂಬ ಮಾಡುವುದನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಪ್ರತಿಯೊಂದು ಅರ್ಜಿಯನ್ನು ನಿಗದಿತ ಕಾಲಮಿತಿಯೊಳಗೆ ಪರಿಶೀಲಿಸಿ ವಿಲೇವಾರಿ ಮಾಡಿ

ನಿಗದಿತ ಅವಧಿಯಲ್ಲಿಯೂ ಅರ್ಜಿಗಳನ್ನು ವಿಲೇವಾರಿ ಮಾಡದೆ ವಿಳಂಬ ಮಾಡಿದಲ್ಲಿ ಸಂಬಂಧಪಟ್ಟ ಬ್ಯಾಂಕ್ ವ್ಯವಸ್ಥಾಪಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಅಗ್ರಣೀಯ ಬ್ಯಾಂಕ್ ವ್ಯವಸ್ಥಾಪಕ ಬಿ. ಸಿದ್ದಯ್ಯ, ಡಿ.ಎಸ್.ಪಿ ಸುನಿಲ ಕಾಂಬಳೆ, ನಬಾರ್ಡ್ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕ ವಿಕಾಸ ರಾಠೋಡ, ಆರ್‌ಬಿಐ ವ್ಯವಸ್ಥಾಪಕರಾದ ಶೀಲ್ ಪ್ರಿಯಾ ಗೌತಮ್, ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾ–ರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ನಾಟಕ ಪರಂಪರೆಯನ್ನು ಉಳಿಸಿ, ಬೆಳೆಸೋಣ

### ವಿಜಯಪುರದಲ್ಲಿ ನಡೆದ ಜಿಲ್ಲಾ ವೃತ್ತಿ ನಾಟಕೋತ್ಸವದಲ್ಲಿ ನಾಟಕ ಅಕಾಡೆಮಿ ಅಧ್ಯಕ್ಷ ಡಾ. ಕೆ.ವಿ. ನಾಗರಾಜಮೂರ್ತಿ ಕರೆ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ರಾಜ್ಯದಲ್ಲಿ ನಾಟಕಗಳ ಪ್ರದರ್ಶನ ಹಾಗೂ ಪರಂಪರೆ ಉಳಿಸಿ ಬೆಳೆಸಬೇಕಿದೆ. ರಂಗಭೂಮಿ ಕಲಾವಿದರು ಪ್ರದರ್ಶಿಸುವ ನಾಟಕಗಳ ಮೂಲಕ ಅವರನ್ನು ಪ್ರೋತ್ಸಾಹಿಸುವ ಸದುದ್ದೇಶದಿಂದ ರಾಜ್ಯದ ಪ್ರತಿ ಜಿಲ್ಲೆಯಲ್ಲಿ ನಾಟಕೋತ್ಸವಗಳನ್ನು ನಾಟಕ ಅಕಾಡೆಮಿ ಹಮ್ಮಿಕೊಳ್ಳುತ್ತಿದೆ

ಎಂದು ಕನಾ9ಟಕ ನಾಟಕ ಅಕಾಡೆಮಿ ಅಧ್ಯಕ್ಷರಾದ ಡಾ. ಕೆ.ವಿ. ನಾಗರಾಜಮೂರ್ತಿ ಅಭಿಪ್ರಾಯಪಟ್ಟರು.

ಗುರುವಾರ ಸಂಜೆ ನಾಟಕೋತ್ಸವದ ಮೊದಲನೆಯ ದಿನದ ಗ್ರಾಮ ಪಂಚಾಯತ ಗಂಗವ್ವ ನಾಟಕ ಉದ್ಘಾಟಿಸಿ ಮಾತನಾಡಿದ ಅವರು, ನಾಟಕಗಳು ಸಮಾಜದ ವಾಸ್ತವಿಕ ವಿಷಯವನ್ನು ಪ್ರಸ್ತಾಪಿಸಿ ಸಮಾಜ–ಕ್ಕೆ ಬಹುದೊಡ್ಡ ಸಂದೇಶ ನೀಡುತ್ತವೆ. ನಾಟಕ ಪ್ರದರ್ಶನ ಮಾಡುವ ರಂಗಭೂಮಿ ಕಲಾವಿದರಿಗೆ ಪ್ರೋತ್ಸಾಹ ಹಾಗೂ ಅವಕಾಶ ನೀಡುವ ಪ್ರಾಮಾಣಿಕ ಪ್ರಯತ್ನವನ್ನು ನಾಟಕ ಅಕಾಡೆಮಿ ಮಾಡುತ್ತಿರುವದು ಹೆಮ್ಮೆಯ ವಿಷಯ ಎಂದರು.

ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಎಲ್. ಬಿ. ಶೇಖ ಮಾಸ್ತರ ಅಧ್ಯಕ್ಷತೆ ವಹಿಸಿ, ರಂಗಭೂಮಿ ಕಲಾವಿದರು ಉತ್ತಮ ತರಬೇತಿ ಹಾಗೂ ತಾಲೀಮು ನಡೆಸಿ ಗುಣಮಟ್ಟದ ನಾಟಕ ಪ್ರದರ್ಶನ ನೀಡಬೇಕು. ಪ್ರೇಕ್ಷಕರ ಮನ ಮುಟ್ಟುವ ಕಥೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ ಭೋವಿ ಮಾತನಾಡಿ, ನಾಟಕಗಳು ಸಮಾಜದ ಕನ್ನಡಿಯಿದ್ದಂತೆ. ಸಮಾಜ ಪರಿವತ9ನೆಗೆ ನಾಟಕಗಳು ಅತ್ಯುತ್ತಮ ಸಾಧನವಾಗಿವೆ ಎಂದರು.

ವೇದಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ, ಕೋಶಾಧ್ಯಕ್ಷ ಅಭಿಷೇಕ ಚಕ್ರವರ್ತಿ, ಹಿರಿಯ ಕಲಾವಿದ ಶ್ರೀಧರ ಹೆಗಡೆ, ಕಸಾಪ ಗೌರವ ಅಧ್ಯಕ್ಷೆ ಜಯಶ್ರೀ ಹಿರೇಮಠ, ಅಲ್ಲಮಪ್ರಭು ಮಲ್ಲಿಕಾರ್ಜುನಮಠ, ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಜಂಬುನಾಥ ಕಂಚ್ಯಾಣಿ ಉಪಸ್ಥಿತರಿದ್ದರು.

ಶಶಿಕಲಾ ನಾಯ್ಕೋಡಿ ಪ್ರಾರ್ಥಿಸಿದರು. ರಿಯಾಜ್ ಪಿಂಜಾರ ಸ್ವಾಗತಿಸಿದರು. ಯಮನಪ್ಪ ಪವಾರ ನಿರೂಪಿಸಿದರು. ಮಹೆತಾಬ್ ಕಾಗವಾಡ ವಂದಿಸಿದರು.

### ಜಿಲ್ಲಾಧಿಕಾರಿ ಡಾ. ಆನಂದ ಕೆ. ಹೇಳಿಕೆ। ವಿದ್ಯಾರ್ಥಿಗಳಿಂದ ವಿಧಾನಸಭೆ ಕಲಾಪದ ಪ್ರದರ್ಶನ

## ಸೆ.15ರಿಂದ ಯುವ ಸಂಸತ್ತು ಸಭೆಗೆ ಚಾಲನೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಯುವ ಸಮುದಾಯಕ್ಕೆ ಸಂಸದೀಯ ವ್ಯವಸ್ಥೆಯನ್ನು ಪರಿಚಯಿಸುವ ಉದ್ದೇಶದಿಂದ ಸೆ.15 ರಂದು ಯುವ ಸಂಸತ್ತು ಸಭೆಗೆ ಚಾಲನೆ ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ್ ಕೆ. ಅವರು ತಿಳಿಸಿದರು.

ಜಿಲ್ಲೆಯ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ನಡೆಸಿದ ವೀಡಿಯೊ ಸಂವಾದದಲ್ಲಿ ಮಾತನಾಡಿದ ಅವರು, ಯುವಕರಲ್ಲಿ ಪ್ರಜಾಪ್ರಭುತ್ವ, ಸಂವಿಧಾನ ಹಾಗೂ ಸಂಸದೀಯ ವ್ಯವಸ್ಥೆಯ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಈ ಬಾರಿ ಮಾನವ ಸರಪಳಿ ಹಾಗೂ ಬೈಕ್ ರ‍್ಯಾಲಿಗಳ ಬದಲಾಗಿ ಯುವ ಸಂಸತ್ತು ಕಾರ್ಯಕ್ರಮಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಸೆ.15ರಂದು ಜಿಲ್ಲಾ ಮಟ್ಟದ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದ್ದು, ವಿಜಯಪುರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಮುಖ್ಯ ಕಾರ್ಯಕ್ರಮ ಆಯೋಜಿಸಲು ಉದ್ದೇಶಿಸಲಾಗಿದೆ ತಿಳಿಸಿದ್ದಾರೆ.

ಸೆ. 16ರಿಂದ ನ. 26ರವರೆಗೆ ವಿವಿಧ ಹಂತಗಳಲ್ಲಿ ಕಾರ್ಯಕ್ರಮ ಮುಂದುವರಿಯಲಿದ್ದು, ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಅಕ್ಟೋಬರ್ 10ರೊಳಗೆ ಯುವ ಸಂಸತ್ತು ಆಯೋಜಿಸಲು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು. ಸೆ.15,ರ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿ ಪ್ರಜಾಪ್ರಭುತ್ವದ ಮಹತ್ವ ಸಾರುವ ಉಪನ್ಯಾಸ ಹಮ್ಮಿಕೊಳ್ಳುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಕರ್ನಾಟಕ ವಿಧಾನಸಭೆಯ ಮಾದ–ರಿಯಲ್ಲಿ ಯುವ ಸಂಸತ್ತನ್ನು ರಚಿಸಲಾಗುತ್ತಿದ್ದು, ಸ್ಥಳಾವಕಾಶಕ್ಕೆ ಅನುಗುಣವಾಗಿ 224 ಅಥವಾ ಕನಿಷ್ಠ 112 ವಿದ್ಯಾರ್ಥಿಗಳನ್ನು ಒಳಗೊಳ್ಳುವಂತೆ ಕ್ರಮವಹಿಸಲಾಗುತ್ತದೆ. ವಿದ್ಯಾರ್ಥಿಗಳು ವಿಧಾನಸಭೆಯ ಕಲಾಪದ ಮಾದರಿಯಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಗಳ ಜಂಟಿ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದವರು ತಿಳಿಸಿದ್ದಾರೆ.

ಪ್ರಜಾಪ್ರಭುತ್ವದ ಮೌಲ್ಯಗಳ ಕುರಿತು ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ವಿಷಯ ತಜ್ಞರು ಮತ್ತು ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರ ಸಂಕಿರಣ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

ಅಧಿಕಾರಿಗಳು ಕಾರ್ಯಕ್ರಮದ ಸಿದ್ಧತೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಿ, ವಿದ್ಯಾರ್ಥಿಗಳ ಆಯ್ಕೆ, ತರಬೇತಿ, ಪೂರ್ವಾಭ್ಯಾಸ ಹಾಗೂ ಯುವ ಸಂಸತ್ತಿನ ಕಲಾಪಗಳನ್ನು ಮಾರ್ಗಸೂಚಿಯಂತೆ ವ್ಯವಸ್ಥಿತವಾಗಿ ನಡೆಸುವಂತೆ ಜಿಲ್ಲಾಧಿಕಾರಿ ಡಾ. ಆನಂದ್ ಕೆ. ನಿರ್ದೇಶನ ನೀಡಿದರು.

ವೀಡಿಯೊ ಸಂವಾದ ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಪ್ರಕಾಶ್ ವಡ್ಡರ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಸಚಿವ ವಿಜಯಕುಮಾರ ಆಜೂರ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಹೇಶ ಪೋತದಾರ, ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಬಿರಾದಾರ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

### ವಿವಿಧ ಕ್ಷೇತ್ರಗಳ 75 ಜನ ಸಾಧಕರಿಗೆ ಪ್ರಶಸ್ತಿ ಪ್ರದಾನ

## ಸೆ.13 ರಂದು ಮಾನವ ಹಕ್ಕುಗಳ ಜಾಗೃತಿ ಸಮಾವೇಶ

■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ಸೆ.13ರಂದು ಬೆಳಿಗ್ಗೆ 10:30 ಕ್ಕೆ ಪಟ್ಟಣದ ಹುಡ್ಕೋದಲ್ಲಿರುವ ಪಂಜುರ್ಲಿ ಫಂಕ್ಷನ್ ಹಾಲ್ ನಲ್ಲಿ ರಾಜ್ಯ ಯೂತ್ ಫಾರ್ ಹ್ಯೂಮನ್ ರೈಟ್ಸ್ ನ ಜಿಲ್ಲಾ ಸಮಿತಿ ಹಾಗೂ ವಿವಿಧ ಘಟಕಗಳ ಸಹಯೋಗದಲ್ಲಿ ಮಾನವ ಹಕ್ಕುಗಳ ಜಾಗೃತಿ ಸಮಾವೇಶ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಮಾನವ ಹಕ್ಕುಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಹಕ್ಕುಗಳ ರಕ್ಷಣೆ ಹಾಗೂ ಸಾಮಾಜಿಕ ನ್ಯಾಯದ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಈ ಸಮಾವೇಶವನ್ನು ಹಮ್ಮಿಕೊಂಡಿದ್ದು, ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿರುವ ಒಟ್ಟು 75 ಸಾಧಕರನ್ನು ಗುರುತಿಸಿ ಹಸಿರು–ಉಸಿರು, ಸಮಾಜ ರತ್ನ, ವೀರ ರತ್ನ ಮತ್ತು ಸಾಧಕ ರತ್ನ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು. ಕಾರ್ಯಕ್ರಮದಲ್ಲಿ ಮಾನವ ಹಕ್ಕುಗಳ ಮಹತ್ವ, ಸಂವಿಧಾನಾತ್ಮಕ ಹಕ್ಕುಗಳು, ಸಾಮಾಜಿ–ಕ ನ್ಯಾಯ ಹಾಗೂ ಹಕ್ಕುಗಳ ಉಲ್ಲಂಘನೆಯ ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕು–ರಿತು ವಿಚಾರ ವಿನಿಮಯ ನಡೆಯಲಿದೆ.

ಕಾರ್ಯಕ್ರಮವನ್ನು ನಿವೃತ್ತ ನ್ಯಾಯವಾದಿ ಜಿ.ಕೆ.ಗೋಖಲೆ ಉದ್ಘಾಟಿಸಲಿದ್ದು, ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಮಲ್ಲಿಕಾರ್ಜುನ ರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಮಾನವ ಹಕ್ಕುಗಳ ಸಮಿತಿಯ ರಾಷ್ಟ್ರೀಯ ಅಧ್ಯಕ್ಷ ಉಮೇಶ ಎನ್ ಪುಷ್ಪನಮನ ಸಲ್ಲಿಸಲಿದ್ದು, ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ ದ ದಕ್ಷಿಣ ಭಾರತದ ಪ್ರಧಾನ ಕಾರ್ಯದರ್ಶಿ ಎ.ಬಿ.ಹೊಸಮನಿ ಮುಖ್ಯ ಭಾಷಣ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎ.ಎಂ.ಬಾಬುನಾಯಕ, ಜಿ.ಎಂ.ದಯಾನಂದ, ಬಿ.ಆರ್.ಪ್ರವೀಣಕುಮಾರ, ಕುಮಾರ ಎನ್, ಅಭಿಷೇಕ ಚಕ್ರವರ್ತಿ, ಸುಬ್ರಹ್ಮಣ್ಯ ಡಿ.ವಿ, ಪುಟ್ಟರಂಗಯ್ಯ ಎನ್, ಸುಬ್ರಹ್ಮಣ್ಯ ಪೂಜಾರಿ, ಕೆ. ಜಯಚಂದ್ರ, ಅಯ್ಯಪ್ಪ ದೊಡಮನಿ, ಸದಾಶಿವ ಅಂಗಡಿ ಭಾಗವಹಿಸಲಿದ್ದಾರೆ.

ಮಾನವ ಹಕ್ಕುಗಳ ರಕ್ಷಣೆಯೊಂದಿಗೆ ಸಾಮಾಜಿಕ ಜಾಗೃತಿ ಮೂಡಿಸುವ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಸಂಘಟನೆಯ ಜಿಲ್ಲಾಧ್ಯಕ್ಷ ಪ್ರಧಾನಿ ವಾಲಿಕಾರ ಸೇರಿದಂತೆ ಎಲ್ಲ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

## ಚೇತನ ಶಿವಶಿಂಪಿಗೆ ವೀರ ರತ್ನ ಪ್ರಶಸ್ತಿ

■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ನ್ಯಾಯವಾದಿ ಹಾಗೂ ಪತ್ರಕರ್ತ ಚೇತನ.ಮ.ಶಿವಶಿಂಪಿ ಅವರಿಗೆ ರಾಜ್ಯ ಯೂತ್ ಫಾರ್ ಹ್ಯೂಮನ್ ರೈಟ್ಸ್ ವತಿಯಿಂದ ಕೊಡಮಾಡುವ ವೀರ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಶಿವಶಿಂಪಿ ಅವರ ಸಮಾಜಮುಖಿ ಕಾರ್ಯಗಳಲ್ಲಿನ ಧೈರ್ಯ, ಸಾಹಸವನ್ನು ಮೆಚ್ಚಿ ಸೆ.13 ರಂದು ಪಟ್ಟಣದ ಪಂಜುರ್ಲಿ ಫಂಕ್ಷನ್ ಹಾಲ್



ನಲ್ಲಿ ನಡೆಯುವ ಮಾನವ ಹಕ್ಕುಗಳ ಜಾಗೃತಿ ಸಮಾವೇಶ ಹಾಗೂ ವಿವಿಧ ಕ್ಷೇತ್ರಗಳಲ್ಲಿನ ಸಾಧಕರಿಗೆ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಈ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಎಂದು ಸಂಘಟನೆಯ ಜಿಲ್ಲಾಧ್ಯಕ್ಷ ಪ್ರಧಾನಿ ವಾಲಿಕಾರ ತಿಳಿಸಿದ್ದಾರೆ.




# ಬಹುಭಾಷಾ ಜ್ಞಾನವೇ ವಿದ್ಯಾರ್ಥಿಗಳ ಪ್ರಗತಿಯ ಕೀಲಿಕೈ :ಶಿಂತ್ರೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮರಾಠಿ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಸಂರಕ್ಷಿಸುವುದರ ಜೊತೆಗೆ ಕನ್ನಡ ಭಾಷೆಯನ್ನೂ ಗೌರವಿಸಬೇಕು. ಬಹುಭಾಷಾ ಜ್ಞಾನವು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ವೈಯಕ್ತಿಕ ಪ್ರಗತಿಗೆ ಸಹಕಾರಿಯಾಗುತ್ತದೆ ಎಂದು ಕರ್ನಾಟಕ ರಾಜ್ಯ ಮರಾಠಿ ಸಾಹಿತ್ಯ ಪರಿಷತ್ತಿನ ವಿಜಯಪುರ ಜಿಲ್ಲಾಧ್ಯಕ್ಷ ದೀಪಕ್ ಶಿಂತ್ರೆ ಹೇಳಿದರು.

ಕರ್ನಾಟಕ ರಾಜ್ಯ ಮರಾಠಿ ಸಾಹಿತ್ಯ ಪರಿಷತ್ತಿನ ವತಿಯಿಂದ ಮರಾಠಿ ವಿದ್ಯಾಲಯದಲ್ಲಿ 'ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು' ವಿಷಯದ ಕುರಿತು ಪ್ರಬಂಧ ಸ್ಪರ್ಧೆ ಹಾಗೂ 'ಮೊಬೈಲ್ ಬಿಟ್ಟು, ಪುಸ್ತಕ ಹಿಡಿಯಿರಿ' ವಿಷಯದ ಕುರಿತು ಭಾಷಣ ಸ್ಪರ್ಧೆ ಆಯೋಜಿಸಲಾಗಿತ್ತು. ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಮಾತೃಭಾಷೆಯೊಂದಿಗೆ ಇತರ ಭಾಷೆಗಳ ಜ್ಞಾನವನ್ನೂ ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ಅಂಜುಮನ್ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎಸ್. ಜೆ. ಜಹಾಗೀರದಾರ್ ಮಾತನಾಡಿ, ವಿದ್ಯಾರ್ಥಿಗಳು ಮೊಬೈಲ್‌ನ್ನು ಮಿತವಾಗಿ ಬಳಸುವುದರ ಜೊತೆಗೆ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿ ಕವಿ ಮಾರುತಿ ತರಸೆ ಅವರು ಪ್ಲಾಸ್ಟಿಕ್ ಮಾಲಿನ್ಯದ ದುಷ್ಪರಿಣಾಮಗಳ ಕುರಿತು ಜನಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಹೇಳಿದರು.

ಮುಖ್ಯೋಪಾಧ್ಯಾಯ ಎ. ವಿ. ದಂಡಗೆ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಕರಾಮಸಾಪದ ಸಹಕಾರ್ಯವಾಹ ಶ್ರೀಮತಿ ಲತಾತಾಯಿ ಝಿಂಗಾಡೆ, ಖಜಾಂಚಿ ಕನ್ನಯ್ಯ ಪೇತಕರ, ಶ್ರೀಪಾದ ಪಾಟಣಕರ, ಶ್ರೀಮತಿ ಅಂಜಲಿ ಗಿರಗಾಂವಕರ ಉಪಸ್ಥಿತರಿದ್ದರು.

ಶಿಕ್ಷಕಿ ಶ್ರೀಮತಿ ರೂಪಾ ಹಿಬಾರೆ ಕಾರ್ಯಕ್ರಮ ನಿರೂಪಿಸಿದರು.

# ಎಸ್.ಎಸ್.ಖಾದ್ರಿ ಗೆ ಪಿ.ಎಚ್.ಡಿ ಪದವಿ ಪ್ರದಾನ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಂಗ್ಲ ಭಾಷೆ ಪ್ರಾಧ್ಯಾಪಕರಾಗಿರುವ ಎಸ್. ಎಸ್. ಖಾದ್ರಿಯವರು ಶ್ರೀ ಕೃಷ್ಣದೇವರಾಯ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಸಂತೋಷ ಜಿ.ಕೆ ಇವರ ಮಾರ್ಗದರ್ಶನದಲ್ಲಿ ಮಂಡಿಸಿದ " ಇಕೋ ಎಸ್ಥಟಿಕ್ಸ್ ಅಂಡ್ ಕಾನ್ಶಿಯಸ್ನೆಸ್ ಆಫ್ ನೇಚರ್ ಇನ್ ದ ಸೆಲೆಕ್ಟ್ ವರ್ಕ್ಸ್ ಆಫ್ ಪೂರ್ಣಚಂದ್ರ ತೇಜಸ್ವಿ ಅಂಡ್ ಶ್ರೀ ಕೃಷ್ಣ ಆಲನಹಳ್ಳಿ" ಎಂಬ ಸಂಶೋಧನಾ ಮಹಾ ಪ್ರಬಂಧಕ್ಕೆ ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ ಇವರು ಪಿ.ಎಚ್.ಡಿ ಪದವಿ ಪ್ರಧಾನ ಮಾಡಿರುತ್ತಾರೆ. ಕನ್ನಡ ಸಾಹಿತಿಗಳಾದ ಕೃಷ್ಣ ಆಲನಹಳ್ಳಿ ಹಾಗೂ ಪೂರ್ಣಚಂದ್ರ ತೇಜಸ್ವಿಯವರ ಕುರಿತು ಆಂಗ್ಲ ಭಾಷೆಯಲ್ಲಿ ಇದು ಪ್ರಥಮ ಮಹಾ ಪ್ರಬಂಧವಾಗಿರುತ್ತದೆ.

ಇವರ ಸಾಧನೆಯನ್ನು ಮೆಚ್ಚಿ ಕಾಲೇಜಿನ ಪ್ರಾಂಶುಪಾಲರು, ಸಿಬ್ಬಂದಿ ವರ್ಗದವರು, ಅತಿಥಿ ಉಪನ್ಯಾಸಕರು, ಸ್ನೇಹಿತ ಬಳಗದವರು ಹಾಗೂ ಅವರ ವಿದ್ಯಾರ್ಥಿಗಳು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿರುತ್ತಾರೆ.

# ಇಂದು ಹಲವು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ

■ ಉದಯರಶ್ಮಿ ದಿನಪತ್ರಿಕೆ




ತಾಳಿಕೋಟೆ: ಪಟ್ಟಣದ ಹೆಸ್ಕಾಂ ಉಪವಿಭಾಗ ವ್ಯಾಪ್ತಿಯ 110/11 ಕೆ.ವಿ. ತಾಳಿಕೋಟೆ ವಿದ್ಯುತ್ ಉಪಕೇಂದ್ರದಿಂದ ಹೊರಹೋಗುವ 11 ಕೆ.ವಿ. ತಾಳಿಕೋಟೆ ಪಟ್ಟಣ ಮಾರ್ಗಕ್ಕೆ ಹೆಚ್ಚುವರಿ ಫೀಡರ್ ನಿರ್ಮಿಸುವ ಕಾಮಗಾರಿ ಕೈಗೊಳ್ಳಲಾಗುತ್ತಿರುವ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 13ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 1 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಹೆಸ್ಕಾಂ ಪ್ರಕಟಣೆ ತಿಳಿಸಿದೆ.

ಈ ಕಾಮಗಾರಿಯ ಹಿನ್ನೆಲೆಯಲ್ಲಿ ತಾಳಿಕೋಟಿ, ಮಿಣಜಗಿ, ಬಳಗಾನೂರ, ತಮದಡ್ಡಿ, ಬಿಳೇಭಾವಿ, ಬಿ. ಸಾಲವಾಡಗಿ, ಮತ್ತಿತರ ಗ್ರಾಮಗಳು ಒಳಗೊಂಡು ಮಾಳನೂರ ಕುಡಿಯುವ ನೀರಿನ ಘಟಕ್ಕೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಳ್ಳಲಿದೆ. ತಾಳಿಕೋಟೆ ಪಟ್ಟಣ ಸೇರಿದಂತೆ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ವ್ಯವಸ್ಥೆ ಸುಧಾರಣೆ ಹಾಗೂ ಭವಿಷ್ಯದಲ್ಲಿ ಉತ್ತಮ ವಿದ್ಯುತ್ ಪೂರೈಕೆ ಕಲ್ಪಿಸುವ ಉದ್ದೇಶದಿಂದ ಈ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದು ಹೆಸ್ಕಾಂ ತಿಳಿಸಿದೆ. ಹೀಗಾಗಿ ಸಾರ್ವಜನಿಕರು ಹಾಗೂ ವಿದ್ಯುತ್ ಗ್ರಾಹಕರು ಸೆ.13ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಹಕ–ರಿಸುವಂತೆ ತಾಳಿಕೋಟೆ ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ರಾಜಶೇಖರ ಹಾದಿಮನಿ ಮನವಿ ಮಾಡಿದ್ದಾರೆ.



# ಗ್ಯಾರಂಟಿ ಸಮಿತಿಗೆ ಅಧ್ಯಕ್ಷರಾಗಿ ತೆಲ್ಲೂರ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ತಾಲೂಕಿನ ಗ್ಯಾರಂಟಿ ಅನುಷ್ಠಾನ ಸಮಿತಿ ನೂತನ ಅಧ್ಯಕ್ಷರನ್ನಾಗಿ ಮಾಜಿ ತಾಪಂ ಸದಸ್ಯ ಬಸವರಾಜ ತೆಲ್ಲೂರ ಆಯ್ಕೆಯಾದರು.

ಸಿಂದಗಿ ಶಾಸಕ ಅಶೋಕ್ ಮನಗೂಳಿ ನಿರ್ದೇಶನದ ಮೇರೆಗೆ ಎರಡನೇ ಅವಧಿಗೆ ಬಸವರಾಜ ತೆಲ್ಲೂರ ಅವರನ್ನು ಗ್ಯಾರಂಟಿ ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು.


ಮೊದಲ ಅವಧಿಯ ಅಧ್ಯಕ್ಷರಾಗಿ ಪ.ಪಂ.ಸದಸ್ಯ ಅಶೋಕ ಕೊಳಾರಿ ಅವರಿದ್ದರು. ಇದರ ಜೊತೆಯಲ್ಲಿ ಗ್ಯಾರಂಟಿ ಸಮಿತಿ ಸದಸ್ಯರಾಗಿದ್ದ ವಾಹಬ ಸುಂಬಡ ಅವರ ನಿಧನದಿಂದ ಆ ಸ್ಥಾನಕ್ಕೆ ಅವರ ಮಗನಾದ ಅನಸ ಸುಂಬಡ ಅವರನ್ನು ನೇಮಕ ಮಾಡಿದರು. ಶುಕ್ರವಾರ ಗ್ಯಾರಂಟಿ ಸಮಿತಿ ಕಾರ್ಯಾಲಯದಲ್ಲಿ ಅಧಿಕಾರ ಪದಗ್ರಹಣ ನಡೆಯಿತು.

ಮಾಜಿ ಪಟ್ಟಣ ಪಂಚಾಯಿತಿ ಸದಸ್ಯ ಸಾಧಿಕ ಸುಂಬಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜ್ ತೆಲ್ಲೂರ, ಗ್ಯಾರಂಟಿ ಸಮಿತಿ ಸದಸ್ಯ ಪ್ರಶಾಂತ್ ನಾಶಿ, ಸೋಮು ಮೇಲಿನಮನಿ, ಮುಖಂಡರಾದ ಭೀಮ ಬಮ್ಮನಹಳ್ಳಿ, ಅಪ್ಪುಗೌಡ ಪಾಟೀಲ ಮುಂತಾದವರು ಇದ್ದರು.

## ಬೆಂಗಳೂರಿನ ಆದಾಯ ತೆರಿಗೆ ಇಲಾಖೆಯ ಅಧಿಕಾರಿ ವಿಜಯಲಕ್ಷ್ಮೀ ಕಲಶೆಟ್ಟಿ ಅಭಿಮತ

# ಕಠಿಣ ಪರಿಶ್ರಮ, ನಿರಂತರ ಅಧ್ಯಯನದಿಂದ ಯಶಸ್ಸು ಸಾಧ್ಯ

■ ಉದಯರಶ್ಮಿ ದಿನಪತ್ರಿಕೆ



ಆಲಮೇಲ: ಕನ್ನಡ ಮಾಧ್ಯಮ ಹಾಗೂ ಗ್ರಾಮೀಣ ಮಟ್ಟದಲ್ಲಿ ಉತ್ತಮ ಶಿಕ್ಷಣ ಪಡೆದು ಅತ್ಯುನ್ನತ ಹುದ್ದೆಯನ್ನು ಪಡೆಯಬಹುದು ಎಂದು ಬೆಂಗಳೂರಿನ ಆದಾಯ ತೆರಿಗೆ ಇಲಾಖೆಯ ಅಧಿಕಾರಿ ವಿಜಯಲಕ್ಷ್ಮೀ ಕಲಶೆಟ್ಟಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಪಟ್ಟಣದ ವಿಶ್ವೇಶ್ವರ ಬಾಲಭಾರತಿ ಅನುದಾನಿತ ಪ್ರಾಥ–ಮಿಕ ಶಾಲೆಯಲ್ಲಿ ಹಮ್ಮಿಕೊಂಡಿರುವ ಸಂಭ್ರಮ ಶನಿವಾರದ ಸಾಧಕರ ಪರಿಚಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ವಿಜಯಲಕ್ಷ್ಮೀ ರವರು, ನಾನು ಕಲಿತ ಶಾಲೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಗೌರವ ಸನ್ಮಾನ ಸ್ವೀಕರಿಸಿ ಮಕ್ಕಳ ಜೊತೆಗೆ ಸಾಧನೆ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳುತ್ತಿರುವುದು ಹೆಮ್ಮೆಯ ಕ್ಷಣ ಎಂದರು. ಮಕ್ಕಳು ಪ್ರಾಥಮಿಕ ಹಂತದಲ್ಲಿಯೇ ತಮ್ಮ ಗುರಿಯನ್ನು ನಿರ್ಧರಿಸಿ ಶಿಕ್ಷಕರ ಮಾರ್ಗದರ್ಶನ ದಿಂದ ನಿರಂತರ ಅಧ್ಯಯನ ಮಾಡಬೇಕು ಅಂದಾಗ ಮಾತ್ರ ಉನ್ನತ ಹುದ್ದೆಯನ್ನು ಪಡೆಯಬಹುದು ಎಂದರು

ಕಳೆದ ಫೆಬ್ರುವರಿ ಯಲ್ಲಿ ಕೆ.ಪಿ.ಎಸ್.ಸಿ ವತಿಯಿಂದ ನಡೆದ ಪರೀಕ್ಷೆಯಲ್ಲಿ ಬೆಂಗಳೂರನ ಸರಕು ಮತ್ತು ಸಾಗಾಣಿಕೆ ಇಲಾಖೆಯ ಆದಾಯ ತೆರಿಗೆ ಇಲಾಖೆಯ ಅಧಿಕಾರಿಯಾಗಿ ಸೇವೆಗೆ ಸೇರಿದ ಹಾಗೂ ಶಾಲೆಯ ಹಳೆಯ ವಿದ್ಯಾರ್ಥಿನಿ ವಿಜಯಲಕ್ಷ್ಮೀ ಕಲಶೆಟ್ಟಿ ರವರ ಸಾಧನೆಯನ್ನು ಗುರುತಿಸಿ ಮಕ್ಕಳಿಗೆ ಪ್ರೇರಣೆ ಸಿಗಲಿ ಎಂಬ ಉದ್ದೇಶದಿಂದ ಅವರನ್ನು ಕರೆಯಿಸಿ ಸನ್ಮಾನಿಸಿ ಸಾಧಕರನ್ನು ಮಕ್ಕಳಿಗೆ ಪರಿಚಯಿಸುವ ಕಾರ್ಯ ಶ್ಲಾಘನೀಯ ಎಂದು ಸಂಸ್ಥೆಯ ಅಧ್ಯಕ್ಷ ಶ್ರೀಶೈಲಪ್ಪ ಜೋಗೂರ ಮಾತನಾಡಿದರು. ಈ ವೇಳೆ ಮುಖ್ಯ ಶಿಕ್ಷಕ ಲಕ್ಷ್ಮೀಪುತ್ರ ಕಿರನಳ್ಳಿ, ಶಿಕ್ಷಕರಾದ ಚಂದ್ರಕಾಂತ ದೇವರಮನಿ, ಪ್ರಶಾಂತ ಗಡದೆ, ಲಕ್ಷ್ಮೀಬಾಯಿ ಹಳೇಮನಿ, ಸುವರ್ಣ ಸಾರಂಗಮಠ, ಸರುಬಾಯಿ ಬಂಡಗರ, ಅಂಜಲಿ ಕನ್ನೊಳ್ಳಿ, ಐಶ್ವರ್ಯ ಬೇಪಾರಿ ಮುಂತಾದವರು ಇದ್ದರು

## ಕಡಪಟ್ಟಿ ಪವಾಡ ಬಸವೇಶ್ವರ ಜಾತ್ರೆಯಲ್ಲಿ ಭಕ್ತಿ ಶ್ರದ್ಧೆಯ ವೈಭವ । ಸಾವಿರಾರು ಭಕ್ತರಿಂದ ಸೇವೆ, ಸಮರ್ಪಣೆ

# ಚಕ್ರವಿಲ್ಲದ ಜೋಡು ಬಸವಣ್ಣನ ರಥಕ್ಕೆ ಹೆಗಲು ನೀಡಿದ ಭಕ್ತರು

■ ಉದಯರಶ್ಮಿ ದಿನಪತ್ರಿಕೆ

ಜಮಖಂಡಿ: ಶ್ರಾವಣ ಮಾಸದ ಕೊನೆಯ ಸೋಮವಾರದ ನಂತರ ಸಮೀಪದ ಕಡಪಟ್ಟಿ ಗ್ರಾಮದಲ್ಲಿ ಪವಾಡ ಬಸವೇಶ್ವರ ಜಾತ್ರಾ ಮಹೋತ್ಸವವು ಭಕ್ತಿ, ಶ್ರದ್ಧೆ ಹಾಗೂ ಸಾಂಪ್ರದಾಯಿಕ ವೈಭವದೊಂದಿಗೆ ವಿಜೃಂಭಣೆಯಿಂದ ಜರುಗಿತು.

ಕರ್ನಾಟಕದಲ್ಲೇ ಅಪರೂಪ ಎನ್ನಬಹುದಾದ ಚಕ್ರ ರಹಿತ ಜೋಡು ಬಸವಣ್ಣನ ರಥೋತ್ಸವ ಜಾತ್ರೆಯ ಪ್ರಮುಖ ಆಕರ್ಷಣೆಯಾಗಿದ್ದು, ಭಕ್ತರು ತಮ್ಮ ಹೆಗಲ ಮೇಲೆ ರಥವನ್ನು ಹೊತ್ತು ಸಾಗಿಸುವ ಮೂಲಕ ವಿಶಿಷ್ಟ ಭಕ್ತಿ ಪರಂಪರೆಯನ್ನು ಮುಂದುವರಿಸಿದರು.

ಜಾತ್ರೆಯ ಅಂಗವಾಗಿ ಮುಂಜಾನೆ ಕಡಪಟ್ಟಿ ಗ್ರಾಮದಿಂದ ದೇವರ ಕಳಸವು ಸಕಲ ವಾದ್ಯಮೇಳಗಳೊಂದಿಗೆ ಬೃಹತ್ ಮೆರವಣಿಗೆಯಲ್ಲಿ ಸಾಗಿ ಶ್ರೀ ಪವಾಡ ಬಸವೇಶ್ವರ ದೇವಸ್ಥಾನ ತಲುಪಿತು. ದೇವಸ್ಥಾನದಲ್ಲಿ ಭಕ್ತರ ಸಮ್ಮುಖದಲ್ಲಿ ಕಳಸಾರೋಹಣ ನೆರವೇರಿಸಲಾಯಿತು. ಬಳಿಕ ಮಧ್ಯಾಹ್ನ 1 ಗಂಟೆಗೆ ಪುಷ್ಪಾಲಂಕಾರ ರಥೋತ್ಸವ ಹಾಗೂ ಸಂಜೆ 7 ಗಂಟೆಗೆ ದೀಪಾಲಂಕಾರ ರಥೋತ್ಸವ ಭಕ್ತರ ಗಮನ ಸೆಳೆಯಿತು.

ಐತಿಹಾಸಿಕ ಹಿನ್ನೆಲೆಯ ಪವಾಡ ಬಸವಣ್ಣ: ಕಡಪಟ್ಟಿಯ ಪವಾಡ ಬಸವೇಶ್ವರ ದೇವಸ್ಥಾನವು ಪುರಾತನ ಕಾಲದಿಂದಲೂ ಈ ಭಾಗದ ಜನರ ಆರಾಧನಾ ಕೇಂದ್ರವಾಗಿ ಗುರುತಿಸಿಕೊಂಡಿದೆ. 'ಕಡಪಟ್ಟಿ ಬಸವಣ್ಣ' ಎಂದೇ ಪ್ರಸಿದ್ಧಿ ಪಡೆದಿರುವ ದೇವಸ್ಥಾನಕ್ಕೆ ಕರ್ನಾಟಕ ಮಾತ್ರವಲ್ಲದೆ ಮಹಾರಾಷ್ಟ್ರ, ಆಂಧ್ರಪ್ರದೇಶ ಸೇರಿದಂತೆ ವಿವಿಧ ಭಾಗಗಳಿಂದಲೂ ಭಕ್ತರು ಆಗಮಿಸಿ ದರ್ಶನ ಪಡೆದು ಹರಕೆ ತೀರಿಸುತ್ತಾರೆ.

ಬಸವಣ್ಣನ ಪವಾಡಗಳ ಕುರಿತು ಹಲವು ಜನಪದ ಕಥೆಗಳು ಹಾಗೂ ಗೀತೆಗಳು ಇಂದಿಗೂ ಈ ಭಾಗದಲ್ಲಿ ಪ್ರಚಲಿತದಲ್ಲಿವೆ. ಇದೇ ಕಾರಣಕ್ಕೆ 'ಕಡಪಟ್ಟಿ ಪವಾಡ ಬಸವಣ್ಣ' ಎಂಬ ಹೆಸರಿನಿಂದ ಈ ಕ್ಷೇತ್ರ ಪ್ರಸಿದ್ಧಿ ಪಡೆದಿದೆ. ಈ ಪವಾಡಗಳ ಕಥನಗಳು ಸ್ಥಳೀಯ ಜನಪದ ಪರಂಪರೆಯ ಭಾಗವಾಗಿ ತಲೆಮಾರುಗಳಿಂದ ಮುಂದುವರಿದು ಬಂದಿವೆ.



ಸಾವಿರಾರು ಭಕ್ತರಿಗೆ ಅನ್ನದಾಸೋಹ: ಜಾತ್ರೆಗೆ ಆಗಮಿಸಿದ ಸಾವಿರಾರು ಭಕ್ತರಿಗೆ ದೇವಸ್ಥಾನದ ವತಿಯಿಂದ ಹಾಗೂ ಭಕ್ತರ ಸಹಕಾರದಿಂದ ಅನ್ನದಾಸೋಹ ಏರ್ಪಡಿಸಲಾಗಿತ್ತು. ದೂರದ ಊರುಗಳಿಂದ ಆಗಮಿಸಿದ ಭಕ್ತರು ದರ್ಶನ ಪಡೆದು, ರಥೋತ್ಸವದಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು.

ಬೆಳಗ್ಗಿನಿಂದಲೇ ದೇವಸ್ಥಾನದ ಸುತ್ತಮುತ್ತ ಭಕ್ತರ ಸಂಚಾರ ಹೆಚ್ಚಾಗಿದ್ದು, ವಾದ್ಯಮೇಳಗಳ ನಾದ, ಭಜನೆ, ಜಯಘೋಷ ಹಾಗೂ ಧಾರ್ಮಿಕ ಕಾರ್ಯಕ್ರಮಗಳಿಂದ ಕಡಪಟ್ಟಿ ಗ್ರಾಮವು ಹಬ್ಬದ ವಾತಾವರಣದಲ್ಲಿ ಕಂಗೊಳಿಸಿತು. ಜಾತ್ರೆಯು ಕೇವಲ ಧಾರ್ಮಿಕ ಆಚರಣೆಗೆ ಸೀಮಿತವಾಗದೆ ಕಡಪಟ್ಟಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರನ್ನು ಒಂದೆಡೆ ಸೇರಿಸುವ ಸಾಂಸ್ಕೃತಿಕ ಮತ್ತು ಸಾಮಾಜಿ–ಕ ಸಂಭ್ರಮವಾಗಿಯೂ ರೂಪುಗೊಂಡಿತು. ಹಿರಿಯರು ಸಂಪ್ರದಾಯವನ್ನು ಮುಂದುವರಿಸಿದರೆ, ಯುವಕರು ಉತ್ಸಾಹದಿಂದ ಜಾತ್ರಾ ವ್ಯವಸ್ಥೆ ಹಾಗೂ ರಥೋತ್ಸವದಲ್ಲಿ ಕೈಜೋಡಿಸಿದ್ದು ವಿಶೇಷವಾಗಿತ್ತು.

ಜಾತ್ರಾ ಮಹೋತ್ಸವದಲ್ಲಿ ಊರಿನ ಗಣ್ಯರಾದ ಶ್ರೀಕಾಂತ ರಾಮದುರ್ಗ, ಬಸಯ್ಯ ಕಡಕೋಳ, ಬಸಯ್ಯ ಮಠಪತಿ, ಸಿದ್ದರಾಮ ಬಗರನಾಳ, ಮಹಾಲಿಂಗ ರಾಮದುರ್ಗ, ರಾಜು ಜಿಡ್ಡಿಮನಿ, ಜಗದೀಶ ಮಾಳಿ, ಬಸವರಾಜ ಜಾಲಿಬೇರಿ, ಜಗದೀಶ ಬೆಳಗಲಿ, ಮಹಾಲಿಂಗ ಜಂಬಗಿ, ಜಕ್ಕಪ್ಪ ಜಿಡ್ಡಿಮನಿ, ಮಾಂತೇಶ್ ಬೆಳಗಲಿ, ಮಂಜುನಾಥ ನ್ಯಾಮಗೌಡ, ಮಲ್ಲಪ್ಪ ಜಾಲಿಬೇರಿ, ಗಿರೀಶ್ ಜಾಲಿಬೇರಿ, ಪ್ರಭು ಧಾರಣಿ, ಮುತ್ತಪ್ಪ ಧಾರಣಿ, ಸದಾಶಿವ ಮಡಿವಾಳರ, ಜಕ್ಕಪ್ಪ ಮೆಂಡಿಗೇರಿ, ಶಂಕರ ಪೂಜಾರಿ, ಕೈಲಾಸ ಬಗರಾಳ, ರವಿ ಮುಗಳಖೋಡ, ಮಹೇಶ ಬೆಳಗಲಿ ಮಲ್ಲಪ್ಪ ಧಾರಣಿ ಸೇರಿದಂತೆ ಗ್ರಾಮದ ಯುವಕರು ಹಾಗೂ ಗಣ್ಯರು ಪಾಲ್ಗೊಂಡಿದ್ದರು.

### ಹೆಗಲ ಮೇಲೆ ರಥ ಹೊರುವ ವಿಶಿಷ್ಟ ಪರಂಪರೆ

**ಕಡಪಟ್ಟಿ ಜಾತ್ರೆಯ ವಿಶೇಷತೆ ಎಂದರೆ ಚಕ್ರಗಳಿಲ್ಲದ ಜೋಡು ಬಸವಣ್ಣನ ರಥ. ಸಾಮಾನ್ಯವಾಗಿ ರಥೋತ್ಸವಗಳಲ್ಲಿ ಚಕ್ರಗಳ ಮೂಲಕ ರಥವನ್ನು ಎಳೆಯುವ ಪದ್ಧತಿ ಕಂಡುಬರುತ್ತದೆ. ಆದರೆ ಕಡಪಟ್ಟಿಯ ಪವಾಡ ಬಸವೇಶ್ವರ ಜಾತ್ರೆಯಲ್ಲಿ ಭಕ್ತರು ತಮ್ಮ ಹೆಗಲ ಮೇಲೆ ರಥವನ್ನು ಹೊತ್ತು ಸಾಗಿಸುವುದು ಇಲ್ಲಿನ ವಿಶಿಷ್ಟ ಧಾರ್ಮಿಕ ಪರಂಪರೆಯಾಗಿದೆ.**

**ಕಡಪಟ್ಟಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಜಾತಿ, ಮತ, ವಯಸ್ಸಿನ ಭೇದವಿಲ್ಲದೆ ರಥೋತ್ಸವದಲ್ಲಿ ಪಾಲ್ಗೊಂಡು ಬಸವಣ್ಣನಿಗೆ ತಮ್ಮ ಸೇವೆ ಸಮರ್ಪಿಸುತ್ತಾರೆ. ರಥ ಸಾಗುವ ಸಂದರ್ಭದಲ್ಲಿ ಭಕ್ತರು ಉತ್ತತ್ತಿ, ಬಾಳೆಹಣ್ಣು, ಕೊಬ್ಬರಿ, ಬೆತ್ತಸು ಸೇರಿದಂತೆ ವಿವಿಧ ಹರಕೆಗಳನ್ನು ಸಮರ್ಪಿಸಿ ಭಕ್ತಿಭಾವ ಮೆರೆದರು.**

# ಶಾಸಕ ಶಿವಾನಂದ ರಿಂದ ಕಾನಿಪ ಸಂಘಕ್ಕೆ 5 ಲಕ್ಷ ರೂ. ದೇಣಿಗೆ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ರಿ) ವಿಜಯಪುರ ಜಿಲ್ಲಾ ಘಟಕದ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಮಾಜಿ ಸಚಿವ ಹಾಗೂ ಬಸವನಬಾಗೇವಾಡಿ ಶಾಸಕರು ಆದ ಡಿಸಿಸಿ ಬ್ಯಾಂಕಿನ ಅಧ್ಯಕ್ಷ ಶಿವಾನಂದ ಪಾಟೀಲ ಅವರು ವೈಯಕ್ತಿಕ 5 ಲಕ್ಷ ರೂ. ಧನ ಸಹಾಯ ಮಾಡಿದರು.ನಗರದ ಡಿಸಿಸಿ ಬ್ಯಾಂಕ್ ಆವರಣದಲ್ಲಿ ತಮ್ಮನ್ನು ಭೇಟಿಯಾದ ಕಾನಿಪ ಸಂಘ ವಿಜಯಪುರ ಜಿಲ್ಲಾ ಘಟಕದ ಪದಾಧಿಕಾರಿಗಳ ಮತ್ತು ಸದಸ್ಯರ ಸಮ್ಮುಖದಲ್ಲಿ ಕಾನಿಪ ಜಿಲ್ಲಾಧ್ಯಕ್ಷ ಅಶೋಕ ಯಡಳ್ಳಿ ಅವರಿಗೆ ರೂ.5 ಲಕ್ಷ ಹಣ ನೀಡಿದರು.

2025 ರಲ್ಲಿ ನಡೆದಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ವೇಳೆ ಮಾಜಿ ಸಚಿವ ಶಿವಾನಂದ ಪಾಟೀಲರು ಕಾರ್ಯನಿರತ ಪತ್ರಕರ್ತರ ಸಂಘ ವಿಜಯಪುರ ಜಿಲ್ಲಾ ಘಟಕಕ್ಕೆ ವೈಯುಕ್ತಿಕವಾಗಿ 5 ಲಕ್ಷ ರೂಪಾಯಿ ನೀಡುವ ವಾಗ್ದಾನ ಮಾಡಿದ್ದರು. ಈ ಹಿನ್ನಲೆ ಇಂದು ಶಾಸಕ ಶಿವಾನಂದ ಪಾಟೀಲರು ಐದು ಲಕ್ಷ ರೂಪಾಯಿಗಳನ್ನು ಸಂಘದ ಅಭಿವೃದ್ಧಿಗಾಗಿ ನೀಡಿದರು.

ಇದೇ ವೇಳೆ ಮಾತನಾಡಿದ ಶಾಸಕ ಶಿವಾನಂದ ಪಾಟೀಲರು ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿ, ಪತ್ರಕರ್ತರ ಹಿತ ಕಾಪಾಡುವ ಕೆಲಸಗಳನ್ನು ಕಾನಿಪ ಸಂಘ ಹೀಗೆಯೇ ಮುಂದುವರಿಸಿಕೊಂಡು ಹೋಗಲಿ ಎಂದು ಸಲಹೆ ನೀಡಿದರು. ಈ ವೇಳೆ ಜಿಲ್ಲಾಧ್ಯಕ್ಷ ಅಶೋಕ ಯಡಳ್ಳಿ ಸಂಘದ ಕಾರ್ಯ ಚಟುವಟಿಕೆಗಳ ಕುರಿತು ಶಿವಾನಂದ ಪಾಟೀಲರಿಗೆ ಮಾಹಿತಿ ನೀಡಿ, ಭವಿಷ್ಯದಲ್ಲಿ ತಮ್ಮ ಸಹಾಯ ಸಹಕಾರ ಸಂಘಕ್ಕಿರಲಿ ಎಂದು ಮನವಿ ಮಾಡಿಕೊಂಡರು.

ಈ ವೇಳೆ ಹಿರಿಯ ಪತ್ರಕರ್ತರಾದ ಸೀತಾರಾಮ ಕುಲಕರ್ಣಿ, ರಾಜೂ ಕೊಂಡಗೂಳಿ, ಸಂಘಟನಾ ಕಾರ್ಯದರ್ಶಿಗಳಾದ ಮೋಹನ ಕುಲಕರ್ಣಿ, ದೇವೇಂದ್ರ ಹೆಳವರ, ಉಪಾಧ್ಯಕ್ಷ ಶಶಿಕಾಂತ ಮೆಂಡೆಗಾರ, ಸಮೀರ್ ಇನಾಂದಾರ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀನಿವಾಸ ಸೂರಗೊಂಡ, ಗುರು ಗದ್ದನಕೇರಿ, ಪವನ ಕುಲಕರ್ಣಿ, ಸಂಜೀವ ಕುಲಕರ್ಣಿ ಸೇರಿದಂತೆ ಹಲವರು ಹಾಜರಿದ್ದರು.

# ಶೈಕ್ಷಣಿಕ ಆರ್ಥಿಕ ಸಹಾಯಕ್ಕಾಗಿ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

**ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ವಿಜಯಪುರ**

ವಿಜಯಪುರ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ವತಿಯಿಂದ ವೀರಶೈವ ಲಿಂಗಾಯತ ಸಮಾಜದ ಬಡ ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿ 2026–27ನೇ ಸಾಲಿನ ಸರಕಾರಿ ಕೋಟಾದಲ್ಲಿ ಸರಕಾರಿ/ಖಾಸಗಿ ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಓದಲು ಪ್ರವೇಶ ಪಡೆದ ಅಭ್ಯರ್ಥಿಗಳಿಗಾಗಿ ಶೈಕ್ಷಣಿಕ ಧನಸಹಾಯಕ್ಕಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಎಮ್.ಬಿ.ಬಿ.ಎಸ್. ವಿದ್ಯಾರ್ಥಿಗೆ 1 ಲಕ್ಷ ರೂಪಾಯಿ ಒಬ್ಬರಿಗೆ ಹಾಗೂ ಇಂಜಿನಿಯರಿಂಗ್ ಕಾಲೇಜಿದಲ್ಲಿ ಪ್ರವೇಶ ಪಡೆದ ಇಬ್ಬರು ವಿದ್ಯಾರ್ಥಿಗಳಿಗೆ ತಲಾ 50 ಸಾವಿರ ರೂಪಾಯಿ ಒಬ್ಬರಂತೆ ಒಟ್ಟು 3 ಜನ–ರಿಗೆ ಪ್ರತಿವರ್ಷ ಧನಸಹಾಯವನ್ನು ನೀಡಲಾಗುತ್ತದೆ. ಇದರ ಪ್ರಯೋಜನವನ್ನು ಪಡೆಯಬಯಸುವ ಬಡ ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಸ್ವವಿವರಗಳನ್ನು ಒಳಗೊಂಡ ಎಲ್ಲ ಮಾಹಿತಿಯನ್ನು ಹೊಂದಿದ ಅರ್ಜಿಯನ್ನು ಅಕ್ಟೋಬರ್ 15ರ ಒಳಗಾಗಿ (15–10–2026) ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ, ಸಜ್ಜನ ಲೆಔಟ್ ಬಂಜಾರಾ ಕಾಲೇಜ ಎದುರುಗಡೆ ಈ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ 9972893998, 9448279250 ಹಾಗೂ 9900582517 ಸಂಪರ್ಕಿಸಬಹುದಾಗಿದೆ ಎಂದು ವಿ.ಸಿ. ನಾಗಠಾಣ ಅಧ್ಯಕ್ಷರು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ವಿಜಯಪುರ ತಿಳಿಸಿದ್ದಾರೆ.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR